ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

EMAIL : dairyadadaari@gmail.com ಸಂಪುಟ: 01 ಸಂಚಿಕೆ: 109

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795 ಭಾನುವಾರ: 05-04-2026

## ಜನಗಣತಿ ಬಳಿಕ ವಿಧಾನಸಭಾ ಕ್ಷೇತ್ರಗಳ ಬದಲಾವಣೆ ಸಾಧ್ಯ



**ದಾವಣಗೆರೆ,ಏ.4**–ದೇಶದಲ್ಲಿ ಜಾರಿಗೆ ಬರಲಿರುವ ಮಹಿಳಾ ಮೀಸಲಾತಿ ಮತ್ತು ಜನಗಣತಿ ಪ್ರಕ್ರಿಯೆ ಬಳಿಕ ಕರ್ನಾಟಕದ ವಿಧಾನಸಭಾ ಕ್ಷೇತ್ರಗಳ ಸಂಖ್ಯೆಯಲ್ಲಿಯೂ ಬದಲಾವಣೆಯಾಗುವ ಸಾಧ್ಯತೆಯಿದೆ ಎಂದು ಗೃಹ ಸಚಿವ ಡಾ. ಜಿ. ಪರಮೇಶ್ವರ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾನಾಡಿದ ಅವರು, ಪ್ರಸ್ತುತ ಕರ್ನಾಟಕದಲ್ಲಿ 224 ವಿಧಾನಸಭಾ ಕ್ಷೇತ್ರಗಳಿದ್ದು, ಪುನರ್ವಿಂಗಡಣೆ ನಂತರ ಈ ಸಂಖ್ಯೆಯಲ್ಲಿ ವ್ಯತ್ಯಾಸವಾಗಲಿದೆ.

ಪ್ರಸ್ತುತ 2.5 ಲಕ್ಷ ಮತದಾರರಿಗೆ ಒಂದು ಕ್ಷೇತ್ರ ಎಂಬ ನಿಯಮ ಇದೆ. ಈ ಸಂಖ್ಯೆ ಹೆಚ್ಚಾದರೆ ಸಹಜವಾಗಿಯೇ ಕ್ಷೇತ್ರಗಳ ಸಂಖ್ಯೆ ಕಡಿಮೆಯಾಗಲಿದೆ. ಒಂದು ವೇಳೆ ಮತದಾರರ ಸಂಖ್ಯೆಯನ್ನು 1.50ಲಕ್ಷ ಅಥವಾ 1.75 ಲಕ್ಷಕ್ಕೆ ಸೀಮೀತಗೊಳಿಸಿದರೆ ಕ್ಷೇತ್ರಗಳ ಸಂಖ್ಯೆಯಲ್ಲಿ ಹೆಚ್ಚಳವಾಗಬಹುದು ಎಂದರು.

ಮಹಿಳಾ ಮೀಸಲಾತಿ ವಿಧೇಯಕವು ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಅನುಮೋದನೆ ಪಡೆದ ನಂತರ, ಅದರ ಅನುಷ್ಠಾನವು ಮುಂಬರುವ ಜನಗಣತಿಯು ಮೇಲೆ ಅವಲಂಬಿತವಾಗಿದೆ. ಕೇಂದ್ರ ಸರ್ಕಾರವು 'ಒಂದು ದೇಶ, ಒಂದು ಚುನಾವಣೆ' ನೀತಿಯನ್ನು ಜಾರಿಗೆ ತರಲು ಉದ್ದೇಶಿಸಿದ್ದು, ಇದರ ಭಾಗವಾಗಿಯೇ ಕ್ಷೇತ್ರಗಳ ಪುನರ್ವಿಂಗಡಣೆ ಪ್ರಕ್ರಿಯೆ ನಡೆಯಲಿದೆ. ಇದು ರಾಜ್ಯದ ರಾಜಕೀಯ ಭೂಪಟದಲ್ಲಿ ಹೊಸ ಬದಲಾವಣೆಗಳಿಗೆ ನಾಂದಿ ಹಾಡಲಿದೆ ಎಂದು ಅಭಿಪ್ರಾಯಿಸಿದರು

## ಮದ್ಲಾಪುರಿನಲ್ಲಿ ಎಂ.ಪಿ.ಎಲ್ ಕ್ರಿಕೇಟ್ ಟೂರ್ನಮೆಂಟ್ ಉದ್ಘಾಟನೆ.



ಧೈರ್ಯದ ದಾರಿ

**ಮಾನ್ವಿ :** ತಾಲೂಕಿನ ಮದ್ಲಾಪುರ ಗ್ರಾಮದಲ್ಲಿ ಒಟ್ಟು ಎಂಟು ತಡಂಗಳು ಒಂದರಂತೆ 14 ಆಟಗಾರರನ್ನು ಆಯ್ಕೆ ಮಾಡಿ ಒಟ್ಟು 112 ಆಟಗಾರರನ್ನು ಒಳಗೊಂಡ ಕ್ರಿಕೇಟ್ ನ ಸಿಸನ್ 02 ಆರಂಭಗೊಂಡಿದೆ.

ಎಂ. ಮಿಸ್ಟ್ 360 ತಂಡದ ಭೀಮೇಶ್ ನಾಯಕ, ಎಂ. ವಿರಾಟ್ ಚಾಲೆಂಜರ್ಸ್ ನ ಶೀವುಕುಮಾರ್ ಬಸವರಾಜ, ಎಂ. ರಾಯಲ್ ನ ಡಾ. ಮಹಿಬೂಬ್ ಮದ್ಲಾಪುರ, ಎಂ. ಬುಲ್ಡೋಜರ್ಸ್ ನ ವಿನಯ ಕುಮಾರ್, ಎಂ. ಸುಪರ್ ಕಿಂಗ್ ಹನುಮಂತ, ಎಂ. ಇಂಡಿಯನ್ಸ್ ಈರಣ್ಣ, ಕಿಂಗ್ಸ್ 11 ಎಲ್ಲೇಶ ತಂಡದ ಮಾಲಿಕರಾಗಿರುತ್ತಾರೆ.

ಉದ್ಘಾಟನಾವೇಳೆಯಲ್ಲಿ ವೆಂಕಟೇಶ ನಿವೃತ್ತ ಶಿರಸ್ಥಾರರು, ಗ್ರಾ.ಪಂ.ಸದಸ್ಯ ಬಸವರಾಜ, ಮುಖಂಡರಾದ ಶರಣಪ್ಪಗೌಡ, ತಿಮ್ಮಯ್ಯ ನಾಯಕ, ವಿನಯ ಕುಮಾರ್, ಹನುಮಂತ ನಾಯಕ, ಅರಣ್ಯ ಇಲಾಖೆಯ ಭೀಮೇಶ್ ನಾಯಕ ಹುಸೇನ್ ಭಾಷ, ಪಾಂಡು, ಅಂಬಣ್ಣ, ಈರಣ್ಣ, ನಾಗರಾಜ, ರವಿಭೋವಿಕರ್, ಸುಭಾಷ, ಅಯ್ಯಪ್ಪ, ಕೃಷ್ಣ, ಶೀವುಮೂರ್ತಿ. ಕ್ರೀಡಾಪಟುಗಳು ಭಾಗಿಯಾಗಿರುತ್ತಾರೆ.

## ಚಂದ್ರಬಂಡ ಗ್ರಾಮದ ಜಯಲಮ್ಮ ಕಾಣೆ: ಪತ್ತೆಗೆ ಪೊಲೀಸರ ಮನವಿ

ಧೈರ್ಯದ ದಾರಿ



**ರಾಯಚೂರು** ರಾಯಚೂರು ತಾಲೂಕಿನ ಯಾಪಲದಿನ್ನಿ ಪೊಲೀಸ್ ಠಾಣೆಯ ವ್ಯಾಪ್ತಿಯ ಚಂದ್ರಬಂಡ ಗ್ರಾಮದ ನಿವಾಸಿಯಾದ ಜಯಲಮ್ಮ ಗಂಡ ಹೊನ್ನಪ್ಪ (31) ಎಂಬ ಮಹಿಳೆಯು 2025ರ ಆಗಸ್ಟ್ 12ರ ಬೆಳಿಗ್ಗೆ 9ಗಂಟೆಯ ಸುಮಾರಿಗೆ ಹೊಲಕ್ಕೆ ಹೋಗುತ್ತೇನೆಂದು ಹೋದವು ಮರಳಿ ಮನೆಗೆ ಬಾರದೆ ಕಾಣೆಯಾಗಿದ್ದು, ಈ ಕುರಿತು ಠಾಣೆಯಲ್ಲಿ ಗುನ್ನೆ ನಂ: 66/2025 ಕಲಂರಡಿ ಮಹಿಳೆ ಕಾಣೆ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಕೊಳ್ಳಲಾಗಿದೆ ಎಂದು ಠಾಣೆಯ ಅಧಿಕಾರಿಗಳು ತಿಳಿಸಿದ್ದಾರೆ.

ಕಾಣೆಯಾದ ಮಹಿಳೆಯು ಚಂದ್ರಬಂಡ ಸೀಮಾದ ಸರ್ವೆ ನಂಬರ್: 269/1 ಹೊಲದಲ್ಲಿ ಕೆಲಸಕ್ಕೆ ಹೊಗಿದ್ದು, ಸಂಜೆ 6ಗಂಟೆ ಸುಮಾರಿಗೆ ಮನೆಗೆ ಕರೆದುಕೊಂಡು ಬರಲು ಹೋದಾಗ ಮಹಿಳೆಯು ಹೊಲದಲ್ಲಿ ಇರಲಿಲ್ಲ. ಅಕ್ಕಪಕ್ಕದ ಊರಿಗಳಾದ ಗಣಮೂರು, ರಾಯಚೂರು, ಸಿಂಗನೋಡಿ, ಮಂತ್ರಾಲಯ, ಮಾದವರಂ, ಗಿಲ್ಲೆಸ್ಗೂರಿನಲ್ಲಿ ವಿಚಾರಿಸಿದ್ದು ಎಲ್ಲಿಯೂ ಪತ್ತೆಯಾಗಿರುವುದಿಲ್ಲ.

ಚರಹೆ: ಕಾಣೆಯಾದ ಮಹಿಳೆಯ ವಯಸು 31, ಮತ್ತು ಮುಖ ಕೆಂಪು ಮೈ ಬಣ್ಣ, ದುಂಡನೆಯ ಮುಖ, ತಲೆಯಲ್ಲಿ ಉದ್ದನೇಯ ಕಪ್ಪು ಕೂದಲು, ಕಪ್ಪು ಚುಕ್ಕೆಯ ಸೀರೆ ಕಪ್ಪು ಬಣ್ಣದ ಕುಪ್ಪಸ ಧರಿಸಲಾಗಿದ್ದು, ಕನ್ನಡ, ತೆಲುಗು ಭಾಷೆ ಮಾತನಾಡುತ್ತಾಳೆ.

ಈ ಕಾಣೆಯಾದ ಮಹಿಳೆಯ ಬಗ್ಗೆ ಸುಳಿವು ಸಿಕ್ಕಲಿ ಯಾಪಲದಿನ್ನಿ ಠಾಣೆ ಪಿಎಸ್ಐ ಮೊಬೈಲ್ ಸಂಖ್ಯೆ: 9480803851, ಸಿ.ಪಿ.ಐ ಗ್ರಾಮೀಣ ವೃತ್ತ ಮೊಬೈಲ್ ಸಂಖ್ಯೆ: 9480803832, ಕಂಟ್ರೋಲ ರೂಂ ದೂರವಾಣೆ ಸಂಖ್ಯೆ: 08532-235635, 9480803832ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಯಾಪಲದಿನ್ನಿ ಪೊಲೀಸ್ ಠಾಣೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನೌಕರರಿಗೆ ರಕ್ಷಣೆ ನೀಡಿ ವೀರಶೈವ ಲಿಂಗಾಯತ ನೌಕರರ ಸಂಘ

**ಬಳ್ಳಾರಿ, ಏ.04:** ಪಾಲಿಕೆಯ ಕಿರಿಯ ಅಭಿಯಂತರ ಜಿ.ಎಂ. ವೀರೇಶ್ ಅವರ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿ ಹಾಗೂ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿ ಕರ್ನಾಟಕ ರಾಜ್ಯ ವೀರಶೈವ ಲಿಂಗಾಯತ ನೌಕರರ ಕ್ಷೇಮಾಭಿವೃದ್ಧಿ ಸಂಘದ ಜಿಲ್ಲಾ ಘಟಕವು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದೆ.



ನಿನ್ನೆ ದಿನ ಪಾಲಿಕೆ ಸದಸ್ಯ ವಿ. ಕುಬೇರ ಎಂಬುವವರು. ವಿನಾಕಾರಣ ವೀರೇಶ್ ಅವರ ಮೇಲೆ ಹಲ್ಲೆ ನಡೆಸಿರುವುದು ಅತ್ಯಂತ ಖಂಡನೀಯ. ಒಬ್ಬ ಸರ್ಕಾರಿ ನೌಕರನ ಮೇಲೆ ಸಾರ್ವಜನಿಕವಾಗಿ ನಡೆದ ಈ ದೌರ್ಜನ್ಯವು ನೌಕರರ ವಲಯದಲ್ಲಿ ಅಭದ್ರತೆಯ ಭಾವನೆಯನ್ನು ಮೂಡಿಸಿದೆ.

ಸರ್ಕಾರಿ ನೌಕರರ ರಕ್ಷಣೆ:ಕರ್ತವ್ಯನಿರತ ಅಥವಾ ಸಾರ್ವಜನಿಕ ಸೇವೆಯಲ್ಲಿರುವ ನೌಕರರ ಮೇಲೆ ಕೈ ಮಾಡುವುದು ಕಾನೂನುಬಾಹಿರವಾಗಿದ್ದು, ಇಂತಹ ಘಟನೆಗಳು ಮರುಕಳಿಸದಂತೆ ಜಿಲ್ಲಾಡಳಿತವು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಆರೋಪಿಗಳ ವಿರುದ್ಧ ಕ್ರಮ:ಜನಪ್ರತಿನಿಧಿಯಾಗಿ ಸಮಾಜಕ್ಕೆ ಮಾದರಿಯಾಗಬೇಕಾದ ಪಾಲಿಕೆ ಸದಸ್ಯರು, 2ನೇಪುಟಕ್ಕೆ►

## ಬೇಸಿಗೆಯಲ್ಲಿ ನೀರಿನ ಸಂಕಷ್ಟ ತಪ್ಪಿಸಲು ಕಠಿಣ ಕ್ರಮ: ಸಚಿವ ಬೋಸರಾಜು ಸೂಚನೆ



ಧೈರ್ಯದ ದಾರಿ

**ಸಿರವಾರ:** ಬೇಸಿಗೆಯ ತಾಪಮಾನ ಏರುತ್ತಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ತೊಂದರೆಯಾಗದಂತೆ ಅಧಿಕಾರಿಗಳು ಸಮರೋಪಾದಿಯಲ್ಲಿ ಕೆಲಸ ಮಾಡಬೇಕು ಎಂದು ಸಚಿವ ಎನ್.ಎಸ್. ಬೋಸರಾಜು ಅವರು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಆಯೋಜಿಸಲಾಗಿದ್ದ ಕುಡಿಯುವ ನೀರಿನ ಸಮಸ್ಯೆ ಕುರಿತ ತುರ್ತು ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

**ಮುನ್ನೆಚ್ಚರಿಕೆ ಕ್ರಮ:** ಬೇಸಿಗೆಯ ಅವಧಿಯಲ್ಲಿ ಯಾವುದೇ ಹಳ್ಳಿಗಳಲ್ಲಿ ನೀರಿನ ಅಭಾವ ಸೃಷ್ಟಿಯಾಗಬಾರದು. ಒಂದು ವೇಳೆ ಸಮಸ್ಯೆ ಕಂಡುಬಂದಲ್ಲಿ ತಕ್ಷಣವೇ ಪರ್ಯಾಯ ವ್ಯವಸ್ಥೆ ಮಾಡಬೇಕು.

**ಅಧಿಕಾರಿಗಳ ಜವಾಬ್ದಾರಿ:** ನಿರ್ಲಕ್ಷ್ಯ ವಹಿಸುವ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವರು ಎಚ್ಚರಿಸಿದರು.

**ಹಣಕಾಸಿನ ಲಭ್ಯತೆ:** ಕುಡಿಯುವ ನೀರಿನ ಕಾಮಗಾರಿಗಳಿಗೆ ಅನುದಾನದ ಕೊರತೆಯಿಲ್ಲ, ಲಭ್ಯವಿರುವ ಅನುದಾನವನ್ನು ಸರಿಯಾಗಿ ಬಳಸಿಕೊಂಡು ಜನರ ದಾಹ ತೀರಿಸಲು ಆದ್ಯತೆ ನೀಡಬೇಕು.

**ಶಾಸಕ ಜಿ. ಹಂಪಯ್ಯ ನಾಯಕ ಅವರ ಸೂಚನೆ:**

ಸಭೆಯಲ್ಲಿ ಉಪಸ್ಥಿತರಿದ್ದ ಮಾನವಿ ಶಾಸಕರಾದ ಜಿ. ಹಂಪಯ್ಯ ನಾಯಕ ಅವರು ಮಾತನಾಡಿ, "ತಾಲೂಕಿನ ಎಲ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಪರಿಸ್ಥಿತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡಬೇಕು. ಪೈಪ್‌ಲೈನ್ ದುರಸ್ತಿ ಅಥವಾ ಮೋಟಾರ್ ಸಮಸ್ಯೆಗಳಿದ್ದರೆ ವಿಳಂಬ ಮಾಡದೆ ಸರಿಪಡಿಸಬೇಕು," ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು. "ಜನರು ಕುಡಿಯುವ ನೀರಿಗಾಗಿ ಅಲೆದಾಡುವಂತಾಗಬಾರದು. ಪ್ರತಿ ಗ್ರಾಮ ಪಂಚಾಯಿತಿಯಲ್ಲೂ ಅಧಿಕಾರಿಗಳು ಸನ್ನದ್ಧರಾಗಿರಬೇಕು." 2ನೇಪುಟಕ್ಕೆ►

## ಮಾತೃಶ್ರೀ ಹೇಮಾವತಿ ಅಮ್ಮನವರ ಹುಟ್ಟು ಹಬ್ಬದ ಅಂಗವಾಗಿ ರೋಗಿಗಳಿಗೆ ಹಣ್ಣು ವಿತರಣೆ

**ಮಾನ್ವಿ:** ಪಟ್ಟಣದ ಸರಕಾರಿ ಆಸ್ಪತ್ರೆಯಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಟ್ರಸ್ಟ್ ವತಿಯಿಂದ ಧರ್ಮಸ್ಥಳದ ಮಾತೃಶ್ರೀ ಹೇಮಾವತಿ ಅಮ್ಮನವರ ಹುಟ್ಟು ಹಬ್ಬದ ಅಂಗವಾಗಿ ತಾ.ಯೋಜನಾಧಿಕಾರಿಗಳಾದ ಸುನೀತಾ ಪ್ರಭು ರವರು ಆಸ್ಪತ್ರೆಯ ರೋಗಿಗಳಿಗೆ ಹಾಲು, ಹಣ್ಣು ಗಳನ್ನು ವಿತರಿಸಿದರು.

ಮಾನ್ವಿ ವಲಯದ ಮೇಲ್ವಿಚಾರಕರಾದ ಮೈಲಾರಿ, ಕಚೇರಿ ಸಿಬ್ಬಂದಿಗಳಾದ ಬಸವಲಿಂಗಪ್ಪ , ಜ್ಞಾನವಿಕಾಸ ಸಮನ್ವಯಾಧಿಕಾರಿ ಜ್ಯೋತಿ ಇದ್ದರು



## ಸಿದ್ದು ಒಬ್ಬರಿಂದಲೇ 5 ಲಕ್ಷ ಕೋಟಿ ಸಾಲ: ಸಿ.ಟಿ. ರವಿ ಟೀಕೆ

**ಬಾಗಲಕೋಟೆ.** ಏ. 4 ಮುಖ್ಯಮಂತ್ರಿ ಸಿದ್ದರಾಮಯ್ಯನವರು ಒಬ್ಬರೇ ಮಾಡಿದ ಸಾಲ 5 ಲಕ್ಷ ಕೋಟಿಗೂ ಹೆಚ್ಚು ಎಂದು ಬಿಜೆಪಿ ರಾಷ್ಟ್ರಿಯ ಮಾಜಿ ಪ್ರಧಾನ ಕಾರ್ಯದರ್ಶಿ ಹಾಗೂ ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ ಅವರು ದೂರಿದ್ದಾರೆ.



ಬಾಗಲಕೋಟೆಯಲ್ಲಿ ಇಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು ರಾಜ್ಯದ ಒಟ್ಟು ಸಾಲ 8 ಲಕ್ಷದ 32 ಸಾವಿರ ಕೋಟಿ ಆಗಿದೆ. ಅದರಲ್ಲಿ ಸಿದ್ದರಾಮಯ್ಯನವರು ಒಬ್ಬರೇ ಮಾಡಿದ ಸಾಲ 5 ಲಕ್ಷ ಕೋಟಿಗೂ ಹೆಚ್ಚು ಎಂದು ಗಮನ ಸೆಳೆದರು. 2023-24ರಲ್ಲಿ 90,280 ಕೋಟಿ, 2024-25ರಲ್ಲಿ 1 ಲಕ್ಷದ 7 ಸಾವಿರ ಕೋಟಿ, 2025-26ರಲ್ಲಿ 1 ಲಕ್ಷದ 16 ಸಾವಿರ ಕೋಟಿ, 2026-27ರಲ್ಲಿ 1 ಲಕ್ಷದ 32 ಸಾವಿರ ಕೋಟಿ ರೂ. ಎಂದು ವಿವರಿಸಿದರು.

ಒಟ್ಟು 8 ವರ್ಷದಲ್ಲಿ ಅವರು ಮುಖ್ಯಮಂತ್ರಿಯಾಗಿ ಮಾಡಿದ ಸಾಲ ಶೇ 60ರಷ್ಟಿದೆ. ಕಳೆದ 30 ವರ್ಷಗಳಲ್ಲಿ ಜೆ.ಎಚ್.ಪಟೇಲ್, ಎಸ್.ಎಂ.ಕೃಷ್ಣ, ಧರ್ಮಸಿಂಗ್, ಎಚ್.ಡಿ.ಕುಮಾರಸ್ವಾಮಿ, ಯಡಿಯೂರಪ್ಪ, ಸದಾನಂದ ಗೌಡ, ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ ಹೀಗೆ ಎಷ್ಟು ಜನ ಮುಖ್ಯಮಂತ್ರಿಗಳಿದ್ದರೋ ಅವರೆಲ್ಲ ಮಾಡಿದ ಸಾಲ ಶೇ 40 ಆಗಿತ್ತು. ಆದರೆ, ಸಿದ್ದರಾಮಯ್ಯ ಅವರೊಬ್ಬರೇ ಮಾಡಿದ ಸಾಲ ಶೇ 60ರಷ್ಟು ಹೀಗಿರುವಾಗ ನಿಮ್ಮನ್ನು ಸಾಲದ ರಾಮಯ್ಯ ಎಂದು ಕರೆಯುವುದು ಸರಿ ಅಲ್ಲವೇ ಎಂದು ಪ್ರಶ್ನಿಸಿದರು.

ತಿಮ್ಮಾಪುರ ಅವರ ಅಬಕಾರಿ ಹಗರಣ 6 ಸಾವಿರ ಕೋಟಿ

ಬಾಗಲಕೋಟೆ ಕುಟುಂಬ ಆರ್.ಬಿ.ತಿಮ್ಮಾಪುರ ಅವರ ಅಬಕಾರಿ ಹಗರಣ 6 ಸಾವಿರ ಕೋಟಿ, ಮುಡಾ ಹಗರಣ, ದರೋಡೆ ಕಾರಣಕ್ಕೆ ನೀವು ಸುದ್ದಿಯಲ್ಲಿದ್ದಿರಿ. ಡ್ರಗ್ಸ್ ಕಾರಣಕ್ಕೆ ಸುದ್ದಿಯಲ್ಲಿದ್ದಿರಿ. ರೈತರ ಆತ್ಮಹತ್ಯೆಯಲ್ಲಿ ರಾಜ್ಯ 2ನೇ ಸ್ಥಾನದಲ್ಲಿ ಇರುವುದು ಒಳ್ಳೆಯ ಸುದ್ದಿಯೇ ಎಂದು ಕೇಳಿದರು. ಸರಕಾರಿ ನೌಕರರು, ಪ್ರಾಮಾಣಿಕ ಅಧಿಕಾರಿಗಳು ಆತ್ಮಹತ್ಯೆ ಮಾಡಿಕೊಂಡದ್ದು ಒಳ್ಳೆಯ ಸುದ್ದಿಯೇ ಎಂದು ಪ್ರಶ್ನಿಸಿದರು.

ವಾಟರ್‌ಮನ್ ಸಂಬಳ ಇಲ್ಲ ಎಂದು ಡೆತ್‌ನೋಟ್ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡದ್ದು ಒಳ್ಳೆಯ ಸುದ್ದಿಯೇ? ಶಾಸಕನ ಭ್ರಷ್ಟಾಚಾರಕ್ಕೆ ಬೇಸತ್ತು ಒಬ್ಬ ಸಬ್ ಇನ್‌ಸ್ಪೆಕ್ಟರ್ ಆತ್ಮಹತ್ಯೆ ಮಾಡಿಕೊಂಡದ್ದು ಒಳ್ಳೆಯ ಸುದ್ದಿಯೇ ಎಂದು ಕೇಳಿದರು. ಈ ರೀತಿ ದಿನಬೆಳಗಾದರೆ ಕೆಟ್ಟ ಕಾರಣಕ್ಕೆ ಈ ಸರಕಾರ ಸುದ್ದಿಯಲ್ಲಿದೆ ಎಂದು ಟೀಕಿಸಿದರು. ಬಾಣಂತಿಯರು, ಹಸುಗೂಸುಗಳ ಸರಣಿ ಸಾವು, ಸರಕಾರಿ ಆಸ್ಪತ್ರೆಯಲ್ಲಿ ಔಷಧಿ ಸರಬರಾಜು ಇಲ್ಲ- ಇವು ಒಳ್ಳೆಯ ಸುದ್ದಿಗಳೇ ಎಂದು ಕೇಳಿದರು.

ಕಾಂಗ್ರೆಸ್ ಸರಕಾರವು ಒಂದೋ ಭ್ರಷ್ಟಾಚಾರದ ಕಾರಣಕ್ಕೆ ಮುಖಪುಟದಲ್ಲಿ ಸುದ್ದಿಯಾಗಿ ಕಾಣಿಸಿಕೊಂಡಿದೆ. ಇನ್ನೊಂದು ಬೆಲೆ ಏರಿಕೆ, ಐಪಿಎಲ್ ಮ್ಯಾಚ್‌ನಲ್ಲಿ ಆರ್‌ಸಿಬಿ ವಿಜಯೋತ್ಸವವನ್ನು ಇವರೇ ಗೆದ್ದವರಂತೆ ಆಚರಿಸಲು ಹೋಗಿ ಕಾಲ್ತುಳಿತದಿಂದ 11 ಜನರ ಅಮಾಯಕರ ಸಾವಿಗೆ ಕಾರಣವಾದುದು- ಈ ಥರ ಕೆಟ್ಟ ಕಾರಣಕ್ಕಾಗಿ ಈ ಸರಕಾರವು ಸುದ್ದಿಯಲ್ಲಿದ್ದುದನ್ನು ನಾವು ನೋಡಬಹುದು ಎಂದರು.

**ಬಾಗಲಕೋಟೆಗೆ ಏನು ಒಳ್ಳೆಯ ಕಾರ್ಯ ಮಾಡಿದ್ದೀರೆಂದು ಹೇಳಿ**–ಮುಖ್ಯಮಂತ್ರಿ ಮತ್ತು ಸಚಿವರು ತಾವು ಮಾಡಿದ ಒಳ್ಳೆಯ ಕಾರ್ಯವನ್ನು ಹೇಳಲಿ ಎಂದು ಸವಾಲು ಹಾಕಿದರು. ಬಾಗಲಕೋಟೆಗೆ ಏನು ಒಳ್ಳೆಯ ಕಾರ್ಯ ಮಾಡಿದ್ದೀರೆಂದು ಹೇಳಿ ಎಂದು ಒತ್ತಾಯಿಸಿದರು. ಚುನಾವಣೆ ಬರದೇ ಇದ್ದರೆ ಇಲ್ಲಿನ ಮೆಡಿಕಲ್ ಕಾಲೇಜಿಗೆ ಅಡಿಗಲ್ಲೂ ಬೀಳುತ್ತಿರಲಿಲ್ಲ ಎಂದು ವ್ಯಂಗ್ಯವಾಡಿದರು. ನೀವು 2014ರ ಚುನಾವಣೆಯಲ್ಲೇ ಬಾಗಲಕೋಟೆಗೆ ಮೆಡಿಕಲ್ ಕಾಲೇಜು ಕೊಡುವುದಾಗಿ ಭಾಷಣ ಮಾಡಿ ಹೋಗಿದ್ದೀರಿ ಎಂಬುದನ್ನು ನೆನಪಿಸಿದರು

ಮೊದಲನೇ ಪುಟದಿಂದ

# ಬೇಸಿಗೆಯಲ್ಲಿ ನೀರಿನ ಸಂಕಷ್ಟ ತಪ್ಪಿಸಲು ಕಠಿಣ ಕ್ರಮ: ಸಚಿವ ಬೋಸರಾಜು ಸೂಚನೆ

ಜಿ. ಹಂಪಯ್ಯ ನಾಯಕ, ಶಾಸಕರು. ಸಭೆಯಲ್ಲಿ ಉಪಸ್ಥಿತರಿದ್ದವರು: ಈ ಸಂದರ್ಭದಲ್ಲಿ ಮಾನ್ಯ ತಸಿಲ್ದಾರರಾದ ಅಶೋಕ್ ಪವರ್. ಸಿಪಿಐ ಶಶಿಕಾಂತ್ ಎಂ. ಮುಖ್ಯ ಅಧಿಕಾರಿಗಳಾದ ಸುರೇಶ್ ಶೆಟ್ಟಿ. ಪಟ್ಟಣ ಪಂಚಾಯತ್ ಅಧ್ಯಕ್ಷರಾದ ಹಾಜಿ ಚೌದ್ರಿ. ಮಾಜಿ ಅಧ್ಯಕ್ಷರಾದ ವೈಭೂಪನಗೌಡ. ಪಟ್ಟಣ ಪಂಚಾಯತ್ ಸದಸ್ಯರಾದ ಮೌಲಾಸಾಬ್ ವರ್ಚಸ್. ಹಾಸೇನಲಿ ಸಾಬ್.ಗುಡದಿನ್ನಿ ಶರಣಪ್ಪ. ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷರಾದ ನಿರ್ಮಲ ಬೆಣ್ಣೆ. ಕಾಂಗ್ರೆಸ್ ತಾಲೂಕ ಅಧ್ಯಕ್ಷರಾದ ಶಿವು ಕುಮಾರ್ ಚುಕ್ಕಿ. ಕಾಂಗ್ರೆಸ್ ಮಹಿಳಾ ತಾಲೂಕು ಅಧ್ಯಕ್ಷರಾದ ರೇಣುಕಾ ಏನ. ಕಾಂಗ್ರೆಸ್ ಮುಖಂಡರಾದ ದಾನ್ ಗೌಡ. .ಸ್ಥಳೀಯ ಜನಪ್ರತಿನಿಧಿಗಳು ಉಪಸ್ಥಿತರಿದ್ದರು.

## ನೌಕರರಿಗೆ ರಕ್ಷಣೆ ನೀಡಿ ವೀರಶೈವ ಲಿಂಗಾಯತ ನೌಕರರ ಸಂಘ

ಕಾನೂನನ್ನು ಕೈಗೆತ್ತಿಕೊಂಡು ಸಾರ್ವಜನಿಕವಾಗಿ ಹಲ್ಲೆ ನಡೆಸಿರುವುದು ಅವರ ಸ್ಥಾನಕ್ಕೆ ತಕ್ಕುದಲ್ಲದ ನಡವಳಿಕೆಯಾಗಿದೆ. ಹಲ್ಲೆ ನಡೆಸಿದ ವಿ. ಕುಬೇರ ಅವರ ವಿರುದ್ಧ ಎಫ್.ಐ.ಆರ್ ದಾಖಲಿಸಿ, ಸೂಕ್ತ ಕಾನೂನು ಕ್ರಮ ಜರುಗಿಸಬೇಕು.

ಕರ್ತವ್ಯಕ್ಕೆ ಅಡ್ಡಿ:ಸರ್ಕಾರಿ ನೌಕರನ ಕೆಲಸಕ್ಕೆ ಅಡ್ಡಿಪಡಿಸಿದ ಮತ್ತು ದೈಹಿಕವಾಗಿ ಹಲ್ಲೆ ಮಾಡಿದ ಹಿನ್ನೆಲೆಯಲ್ಲಿ ಕಠಿಣ ಸೆಕ್ಷನ್ಗಳ ಅಡಿಯಲ್ಲಿ ಪ್ರಕರಣ ದಾಖಲಾಗಬೇಕು.

ನೌಕರರ ಹಿತರಕ್ಷಣೆ ಮತ್ತು ನ್ಯಾಯದ ಪರವಾಗಿ ತಾವು ತಕ್ಷಣವೇ ಸ್ಪಂದಿಸಿ, ನೊಂದ ನೌಕರರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಮನವಿಯಲ್ಲಿ ಉಲ್ಲೇಖಿಸಿದೆ.

ಸಂಘದ ಜಿಲ್ಲಾ ಅಧ್ಯಕ್ಷ ಎಸ್.ಎಂ.ಭದ್ರಯ್ಯ, ರಾಜಶೇಖರಗೌಡ, ಶಶಿಧರ, ಕೋಳೂರು ವೆಂಕಟೇಶಗೌಡ, ಅಕ್ಕಿ ದರ್ಮೇಂದ್ರ, ಪಲ್ಲೇದ ಜಗದೀಶ್ ಅನ್ನದಾನಯ್ಯಸ್ವಾಮಿ ಮೊದಲಾದವರಿದ್ದರು.

## ಏ.6ರಿಂದ ಮಕ್ಕಳಿಗಾಗಿ ವಿಶೇಷ ಬೇಸಿಗೆ ಶಿಬಿರ ಆಯೋಜನೆ

**ಬೀದರ್: ಏ.4:**ಗ್ಲೋಬಲ್ ಸೈನಿಕ್ ಅಕಾಡೆಮಿಯಲ್ಲಿ ದಿನಾಂಕ 06–04–2026 ರಿಂದ 19 ಏಪ್ರಿಲ್ ವರೆಗೆ ಮಕ್ಕಳಿಗಾಗಿ ವಿಶೇಷ ಬೇಸಿಗೆ ಶಿಬಿರವನ್ನು ಪ್ರಾರಂಭಿಸಲಾಗುತ್ತಿದೆ. ಈ ದಿನ ವೇಗದ ಜೀವನಶೈಲಿಯಲ್ಲಿ ಮಕ್ಕಳಿಗೆ ಶಿಕ್ಷಣದ ಜೊತೆಗೆ ಮನರಂಜನೆ ಹಾಗೂ ಕೌಶಲ್ಯಾಭಿವೃದ್ಧಿ ಅತ್ಯಂತ ಅಗತ್ಯವಾಗಿದೆ. ಈ ಅಗತ್ಯವನ್ನು ಮನಗಂಡು, ಅಕಾಡೆಮಿಯು ಈ ಶಿಬಿರವನ್ನು ಆಯೋಜಿಸಿದ್ದು, ಮಕ್ಕಳ ಸರ್ವಾಂಗೀಣ ಬೆಳವಣಿಗೆಯನ್ನು ಗುರಿಯಾಗಿಸಿಕೊಂಡಿದೆ.

ಈ ಶಿಬಿರದಲ್ಲಿ ಗ್ಲೋಬಲ್ ಸೈನಿಕ್ ಅಕಾಡೆಮಿಯ ವಿದ್ಯಾರ್ಥಿಗಳಷ್ಟೇ ಅಲ್ಲದೆ, ಇತರೆ ಶಾಲೆಗಳ ವಿದ್ಯಾರ್ಥಿಗಳಿಗೂ ಭಾಗವಹಿಸುವ ಅವಕಾಶವನ್ನು ಕಲ್ಪಿಸಲಾಗಿದೆ. ವಿವಿಧ ವಯೋಮಾನದ ಮಕ್ಕಳಿಗೆ ಅನುಗುಣವಾಗಿ ತರಬೇತಿಗಳನ್ನು ವಿನ್ಯಾಸಗೊಳಿಸಲಾಗಿದ್ದು, ಅನುಭವಸಂಪನ್ನ ತರಬೇತಿದಾರರಿಂದ ಮಾರ್ಗದರ್ಶನ ನೀಡಲಾಗುತ್ತದೆ.

ಶಿಬಿರದಲ್ಲಿ ಧ್ಯಾನ ಮತ್ತು ಯೋಗದ ಮೂಲಕ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಸುಧಾರಿಸುವುದು, ನೃತ್ಯ ಮತ್ತು ಸಂಗೀತದ ಮೂಲಕ ಸೃಜನಾತ್ಮಕತೆಯನ್ನು ಉತ್ತೇಜಿಸುವುದು, ಒಬ್ಬಟಾಕಲ್ ಕೋರ್ಸ್, ಕುದುರೆ ಸವಾರಿ ಮತ್ತು ಟ್ರೆಕ್ಕಿಂಗ್ ಮೂಲಕ ಧೈರ್ಯ ಮತ್ತು ಸಾಹಸ ಮನೋಭಾವವನ್ನು ಬೆಳೆಸುವುದು, ಈಜು, ಶೂಟಿಂಗ್ ಹಾಗೂ ಆರ್ಚರಿ ಮೂಲಕ ಕ್ರೀಡಾ ಕೌಶಲ್ಯಗಳನ್ನು ವೃದ್ಧಿಸುವುದು ಸೇರಿದಂತೆ ಹಲವು ಚಟುವಟಿಕೆಗಳನ್ನು ಒಳಗೊಂಡಿದೆ. ಜೊತೆಗೆ ಹಾಗೂ ಜೀವನ ಕೌಶಲ್ಯಗಳ ಮೂಲಕ ಮಕ್ಕಳಲ್ಲಿ ತಾರ್ಕಿಕ ಚಿಂತನೆ, ನಿರ್ಧಾರ ಸಾಮರ್ಥ್ಯ ಮತ್ತು ಸ್ವಾವಲಂಬನೆಯನ್ನು ಬೆಳೆಸುವ ವಿಶೇಷ ತರಗತಿಗಳನ್ನೂ ಏರ್ಪಡಿಸಲಾಗಿದೆ. ಇದರೊಂದಿಗೆ, ಮಕ್ಕಳಿಗೆ ಸುರಕ್ಷಿತ ಹಾಗೂ ಸುಲಭ ಸಾರಿಗೆ ವ್ಯವಸ್ಥೆ, ಸ್ವಚ್ಛ ಹಾಗೂ ರುಚಿಕರ ತಿಂಡಿ ವ್ಯವಸ್ಥೆಯನ್ನು ಒದಗಿಸಲಾಗಿದ್ದು, ಪೋಷಕರು ಯಾವುದೇ ಆತಂಕವಿಲ್ಲದೆ ತಮ್ಮ ಮಕ್ಕಳನ್ನು ಶಿಬಿರಕ್ಕೆ ಕಳುಹಿಸಬಹುದಾಗಿದೆ.

ಈ ಶಿಬಿರದ ಮುಖ್ಯ ಉದ್ದೇಶ ಮಕ್ಕಳಲ್ಲಿರುವ ಹುದುಗಿರುವ ಪ್ರತಿಭೆಯನ್ನು ಗುರುತಿಸಿ, ಅದನ್ನು ಹೊರತೆಗೆದು, ಅವರಲ್ಲಿ ಆತ್ಮವಿಶ್ವಾಸವನ್ನು ಹೆಚ್ಚಿಸುವುದಾಗಿದೆ. ಮಕ್ಕಳು ತಮ್ಮ ಬಿಡುವಿನ ಸಮಯವನ್ನು ಸದುಪಯೋಗಪಡಿಸಿಕೊಂಡು, ತಮ್ಮ ಆಸಕ್ತಿ ಮತ್ತು ಪ್ರತಿಭೆಗಳ ಅಭಿವೃದ್ಧಿಗೆ ಇದು ಉತ್ತಮ ವೇದಿಕೆಯಾಗಲಿದೆ. ಇಂತಹ ಶಿಬಿರಗಳು ಮಕ್ಕಳ ವ್ಯಕ್ತಿತ್ವ ವಿಕಾಸದಲ್ಲಿ ಮಹತ್ತರ ಪಾತ್ರ ವಹಿಸುತ್ತವೆ. ನಮ್ಮ ಶಾಲೆಯ ಮಕ್ಕಳು ಶೋಟಿಂಗ್ ನಲ್ಲಿ ರಾಷ್ಟ್ರ ಮಟ್ಟದಲ್ಲಿ ಆಯ್ಕೆ ಆಗಿದ್ದಾರೆ. ರಾಜ್ಯ ಮಟ್ಟದ ಶೋಟಿಂಗ್ ಸ್ಪರ್ಧೆಯಲ್ಲಿ 14 ಪದಕಗನ್ನು ತಮ್ಮ ಮೂಡಿಗೆರಿಸಿಕೊಂಡಿದ್ದಾರೆ ಮತ್ತು ರಾಜ್ಯದಲ್ಲಿ ಎರಡನೆಯ ಸ್ಥಾನ ಪಡೆದಿದ್ದಾರೆ.

ಪ್ರತಿ ವರ್ಷ ಬೀದರ್ ನಗರದ ಅನೇಕ ಮಕ್ಕಳು ಈ ಶಿಬಿರದಿಂದ ಪ್ರಯೋಜನ ಪಡೆದುಕೊಂಡಿದ್ದು, ಅವರಲ್ಲಿ ಉತ್ತಮ ಬದಲಾವಣೆ ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ, ಈ ವರ್ಷವೂ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಈ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಸಂಸ್ಥೆಯ ಅಧ್ಯಕ್ಷರಾದ ಕರ್ನಲ್ ಶರಣಪ್ಪಾ ಸಿಕೇನಪುರೆ ಅವರು ಈ ಪತ್ರಿಕಾ ಪ್ರಕಟಣೆ ಮುಖಾಂತರ ತಿಳಿಸಿದ್ದಾರೆ.

# ಸ್ಪರ್ಧಾತ್ಮಕ ಯುಗದಲ್ಲಿ ಕರಿಯರ್ ಗೈಡೆನ್ಸ್ ಅತ್ಯಾವಶ್ಯಕ



**ಕಲಬುರಗಿ:** ಕರಿಯರ್ ಗೈಡೆನ್ಸ್ ವಿದ್ಯಾರ್ಥಿಗಳು ಮತ್ತು ಯುವಜನರು ತಮ್ಮ ಆಸಕ್ತಿ, ಸಾಮರ್ಥ್ಯ ಮತ್ತು ಕೌಶಲ್ಯಗಳಿಗೆ ಅನುಗುಣವಾಗಿ ಸರಿಯಾದ ವೃತ್ತಿಜೀವನವನ್ನು ಆಯ್ಕೆ ಮಾಡಲು ಸಹಾಯ ಮಾಡುವ ಪ್ರಮುಖ ಪ್ರಕ್ರಿಯೆಯಾಗಿದೆ. ಇದು ಸ್ಪರ್ಧಾತ್ಮಕ ಜಗತ್ತಿನಲ್ಲಿ ನಿಖರವಾದ ಗುರಿಗಳನ್ನು ಹೊಂದಲು, ಉದ್ಯೋಗ ಮಾರುಕಟ್ಟೆಯ ಜ್ಞಾನ ಪಡೆಯಲು ಮತ್ತು ಆತ್ಮವಿಶ್ವಾಸದಿಂದ ಭವಿಷ್ಯ ರೂಪಿಸಿಕೊಳ್ಳಲು ಅತ್ಯಾವಶ್ಯಕವಾಗಿದೆ ಎಂದು ಬೆಂಗಳೂರಿನ ಖ್ಯಾತ ಕರಿಯರ್ ಗೈಡೆನ್ಸ್ ತರಬೇತಿದಾರ ಚಿರಂಜೀವಿ ದೇಸಾಯಿ ಹೇಳಿದರು.

ನಗರದ ಹೊಸ ಜೇವರ್ಗಿ ರಸ್ತೆಯ 'ಗೇಟ್ಸ್ ಪ್ರಥಮ ದರ್ಜೆ ಕಾಲೇಜ್'ನಲ್ಲಿ 'ಉನ್ನತಿ ಶಿಕ್ಷಣ ಮತ್ತು ಕಲ್ಯಾಣ ಸಂಸ್ಥೆ'ಯ ವತಿಯಿಂದ ಶುಕ್ರವಾರ ಜರುಗಿದ 'ಕರಿಯರ್ ಗೈಡೆನ್ಸ್ ವಿಶೇಷ ಉಪನ್ಯಾಸ ಕಾರ್ಯಕ್ರಮ'ವನ್ನು ಉದ್ಘಾಟಿಸಿ, ಅವರು ಮಾತನಾಡಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಅರ್ಥಶಾಸ್ತ್ರ ಉಪನ್ಯಾಸಕ ಎಚ್.ಬಿ.ಪಾಟೀಲ್ ಮಾತನಾಡಿ, ಸೂಕ್ತ ಕಾಲಕ್ಕೆ, ಸೂಕ್ತ ಮಾರ್ಗದರ್ಶನ ಅಗತ್ಯವಾಗಿದೆ. ಕರಿಯರ್ ಗೈಡೆದಿಂದ ವಿದ್ಯಾರ್ಥಿಗಳು ತಮ್ಮ ಆಸಕ್ತಿ ಮತ್ತು ಕೌಶಲ್ಯಗಳಿಗೆ ಸೂಕ್ತವಾದ ಶಿಕ್ಷಣ ಮತ್ತು ವೃತ್ತಿಜೀವನವನ್ನು ಆಯ್ಕೆ ಮಾಡಲು ಸಹಾಯ ಮಾಡುತ್ತದೆ. ಭವಿಷ್ಯದ ಗುರಿಗಳನ್ನು ಸ್ಪಷ್ಟಪಡಿಸಲು ಮತ್ತು ಅವುಗಳನ್ನು ಸಾಧಿಸಲು ಕ್ರಿಯಾ ಯೋಜನೆ ಸಿದ್ಧಪಡಿಸಲು ಇದು ಸಹಕಾರಿಯಾಗಿದೆ. ಪ್ರಸ್ತುತ ಉದ್ಯೋಗ ಮಾರುಕಟ್ಟೆಯಲ್ಲಿನ ಬೇಡಿಕೆ, ಹೊಸ ಉದ್ಯೋಗಾವಕಾಶಗಳು ಮತ್ತು ಅಗತ್ಯವಿರುವ ಕೌಶಲ್ಯಗಳ ಬಗ್ಗೆ ಮಾಹಿತಿ ನೀಡುತ್ತದೆ. ಸರಿಯಾದ ನಿರ್ಧಾರ ತೆಗೆದುಕೊಳ್ಳುವ ಮೂಲಕ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಹೆಚ್ಚುತ್ತದೆ ಮತ್ತು ಭವಿಷ್ಯದ ಬಗೆಗಿನ ಆತಂಕ ಕಡಿಮೆಯಾಗುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಗೇಟ್ಸ್ ಸಂಸ್ಥೆಯ ಅಧ್ಯಕ್ಷ, ಶೈಕ್ಷಣಿಕ ಚಿಂತಕ ಡಾ.ಎಚ್.ಬಿ.ಕಂಟೆಗೋಳ ಮಾತನಾಡಿ, ಕರಿಯರ್ ಗೈಡೆವು ಕೇವಲ ಅಂಕಗಳಿಕೆಯಲ್ಲದೆ, ವ್ಯಕ್ತಿತ್ವ ವಿಕಸನ ಮತ್ತು ಜೀವನ ಕೌಶಲ್ಯಗಳನ್ನು ಬೆಳೆಸಿಕೊಳ್ಳಲು ಮಾರ್ಗದರ್ಶನ ನೀಡುತ್ತದೆ. ವೃತ್ತಿಜೀವನದಲ್ಲಿ ಎದುರಾಗಬಹುದಾದ ಅಡೆತಡೆಗಳನ್ನು ಗುರುತಿಸಿ, ಅವುಗಳನ್ನು ನಿವಾರಿಸಲು ತಂತ್ರಗಳನ್ನು ರೂಪಿಸಲು ಸಹಾಯ ಮಾಡುತ್ತದೆ. ಶಾಲಾ ಅಥವಾ ಕಾಲೇಜು ಹಂತದಲ್ಲೇ ಕರಿಯರ್ ಗೈಡೆನ್ಸ್ ಪಡೆಯುವುದರಿಂದ ಯಶಸ್ವಿ ಮತ್ತು ತೃಪ್ತಿದಾಯಕ ವೃತ್ತಿಜೀವನವನ್ನು ರೂಪಿಸಿಕೊಳ್ಳಬಹುದು ಎಂದು ತಿಳಿಸಿದರು.

ಕರಿಯರ್ ಗೈಡೆನ್ಸ್ ಹಾಗೂ ಕೌಶಲ ಅಭಿವೃದ್ಧಿ ತರಬೇತಿದಾರೆ ಸುಪ್ರಿಯಾ ಕುಲಕರ್ಣಿ ವಿಶೇಷ ಉಪನ್ಯಾಸ ನೀಡಿದರು. ಕಾರ್ಯಕ್ರಮದಲ್ಲಿ ಸಾಮಾಜಿಕ ಚಿಂತಕ ಶಿವಯೋಗೆಪ್ಪಾ ಎಸ್.ಬಿರಾದಾರ, ಕಾಲೇಜಿನ ಪ್ರಾಂಶುಪಾಲೆ ಪ್ರೊ.ನೇಹಾ ಎಚ್.ಕಂಟೆಗೋಳ್, ಉಪನ್ಯಾಸಕರಾದ ಶಿವಲಿಂಗಪ್ಪ ತಳವಾರ, ಉಮಾದೇವಿ ತಿಪ್ಪಾ, ರೋಹಿಣಿ ತೋರಣ, ಶ್ರೀದೇವಿ, ಅಕಿಲಾ, ಸಿಬ್ಬಂದಿ ಭರತಕುಮಾರ ಹಾಗೂ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

# ಪತ್ರಕರ್ತರಿಗೆ ಗುರುದ್ವಾರ, ಖಾಸಗಿ ವಸತಿ ಗೃಹಗಳಲ್ಲಿ ವಸತಿ ವ್ಯವಸ್ಥೆಪತ್ರಕರ್ತರ ರಾಜ್ಯ ಸಮ್ಮೇಳನ: 11ಕ್ಕೆ ಅದ್ದೂರಿ ಮೆರವಣಿಗೆ



**ಬೀದರ್: ಏ.4:**ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ 40ನೇ ಪತ್ರಕರ್ತರ ರಾಜ್ಯ ಸಮ್ಮೇಳನದ ನಿಮಿತ್ತ ಏ. 11 ರಂದು ನಗರದಲ್ಲಿ ಅದ್ದೂರಿ ಮೆರವಣಿಗೆ ನಡೆಸಲು ಸಮ್ಮೇಳನ ಮೆರವಣಿಗೆ ಸಮಿತಿ ನಿರ್ಧರಿಸಿದೆ.

ನಗರದಲ್ಲಿ ಬುಧವಾರ ನಡೆದ ಸಮ್ಮೇಳನ ಮೆರವಣಿಗೆ ಸಮಿತಿಯ ಸಭೆಯಲ್ಲಿ ಈ ಕುರಿತು ತೀರ್ಮಾನ ಕೈಗೊಳ್ಳಲಾಯಿತು.

ಅಂದು ಬೆಳಿಗ್ಗೆ ನಗರದ ಬಸವೇಶ್ವರ ವೃತ್ತದಿಂದ ಭಗತಸಿಂಗ್ ವೃತ್ತ, ಅಂಬೇಡ್ಕರ್ ವೃತ್ತ, ಸಿದ್ಧಾರ್ಥ ಕಾಲೇಜು ಮಾರ್ಗವಾಗಿ ಸಮ್ಮೇಳನ ಸ್ಥಳವಾದ ಝೀರಾ ಕನ್ವೆನ್ಷನ್ ಹಾಲ್‌ವರೆಗೆ ಮೆರವಣಿಗೆ ಜರುಗಲಿದೆ ಎಂದು ಸಮಿತಿಯ ಪ್ರಮುಖರು ತಿಳಿಸಿದರು.

ಮೆರವಣಿಗೆಯಲ್ಲಿ ಅಲಂಕೃತ ರಥದಲ್ಲಿ ಸಮ್ಮೇಳನದ ಲೋಗೋ ಇರಲಿದೆ. ಬೀದರ್ ಸೇರಿ ವಿವಿಧ ಜಿಲ್ಲೆಗಳ ಕಲಾ ತಂಡಗಳು ಮೆರವಣಿಗೆಯ ವೈಭವ ಹೆಚ್ಚಿಸಲಿವೆ ಎಂದು ಹೇಳಿದರು.

ಮೆರವಣಿಗೆ ಮಾರ್ಗದಲ್ಲಿ ಸಂಘ ಸಂಸ್ಥೆಗಳು, ಪುಷ್ಪವೃಷ್ಟಿ ಮಾಡಿ ಮೆರವಣಿಗೆಯನ್ನು ಸ್ವಾಗತಿಸಿ ಬರಮಾಡಿಕೊಳ್ಳಲಿವೆ ಎಂದು ತಿಳಿಸಿದರು.

ಕರ್ನಾಟಕ ಕಾರ್ಯನಿರತ ಪ್ರತಕರ್ತರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಆನಂದ ದೇವಪ್ಪ, ಜಿಲ್ಲಾ ಅಡಾಕ್ ಸಮಿತಿ ಸದಸ್ಯ ಅಪ್ಪಾರಾವ್ ಸೌದಿ, ಮೆರವಣಿಗೆ ಸಮಿತಿ ಪ್ರಧಾನ ಸಂಚಾಲಕ ಡಾ. ರಜನೀಶ್ ವಾಲಿ, ಸಂಚಾಲಕ ವಿಜಯಕುಮಾರ ಸೋನಾರೆ, ಸಹ ಸಂಚಾಲಕ ನಂದಕುಮಾರ ಕರಂಜೆ, ಸದಸ್ಯ ಸುನೀಲ್ ಭಾವಿಕಟ್ಟಿ ಮತ್ತಿತರರು ಇದ್ದರು.

ವಸತಿ ಸಮಿತಿ ಸಭೆ: ಸಮ್ಮೇಳನದಲ್ಲಿ ಪಾಲ್ಗೊಳ್ಳಲು ರಾಜ್ಯದ ವಿವಿಧೆಡೆಯಿಂದ ನಗರಕ್ಕೆ ಆಗಮಿಸುವ ಪತ್ರಕರ್ತರಿಗೆ ವಸತಿ ವ್ಯವಸ್ಥೆ ಮಾಡುವ ಕುರಿತು ನಗರದ ಪತ್ರಿಕಾ ಭವನದಲ್ಲಿ ಶುಕ್ರವಾರ ವಸತಿ ಸಮಿತಿ ಸಭೆ ನಡೆಯಿತು.

ಹೊರ ಜಿಲ್ಲೆಗಳ ಪತ್ರಕರ್ತರ ವಾಸ್ತವ್ಯಕ್ಕೆ ನಗರದ ಗುರುದ್ವಾರದ ವಸತಿ ಗೃಹಗಳು ಹಾಗೂ ಖಾಸಗಿ ವಸತಿ ಗೃಹಗಳಲ್ಲಿ ಈಗಾಗಲೇ ವ್ಯವಸ್ಥೆ ಮಾಡಲಾಗಿದೆ ಎಂದು ಸಮಿತಿ ಪ್ರಮುಖರು ಮಾಹಿತಿ ನೀಡಿದರು.

ಸಮ್ಮೇಳನಕ್ಕೆ ಬರುವ ಪತ್ರಕರ್ತರಿಗೆ ವಸತಿಗೆ ಯಾವುದೇ ತೊಂದರೆ ಆಗದಂತೆ ನೋಡಿಕೊಳ್ಳಬೇಕು ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಆನಂದ ದೇವಪ್ಪ ತಿಳಿಸಿದರು.

ವಸತಿ ಸಮಿತಿಯ ಸಂಚಾಲಕ ಸಂತೋಷ್ ಚೆಟ್ಟಿ, ಸಹ ಸಂಚಾಲಕ ಶ್ರೀಕಾಂತ ಪಾಟೀಲ, ರೇವಣಸಿದ್ದಪ್ಪ ಡಿ, ಪೃಥ್ವಿರಾಜ, ಮಾಣಿಕೇಶ ಪಾಟೀಲ, ಸಂಗಮೇಶ ಮೂಲಗೆ, ರಾಜಕುಮಾರ ಮಡಕಿ, ನಂದಕುಮಾರ ಕರಂಜೆ ಮತ್ತಿತರರು ಇದ್ದರು.

# ಸರ್ವರ ಸಬಲೀಕರಣದ ಬಜೆಟ್:ಡಾ. ದಶರಥ ಮೇತ್ರಿ



**ಕಲಬುರಗಿ:ಏ.4:**ನಗರದ ಕೆಪಿಇ ಶಿಕ್ಷಣ ಸಂಸ್ಥೆಯ ಡಾ. ಅಂಬೇಡ್ಕರ್ ಪದವಿ ಮಹಾವಿದ್ಯಾಲಯದಲ್ಲಿ ಅರ್ಥಶಾಸ್ತ್ರ ವಿಭಾಗದ ವತಿಯಿಂದ ಕರ್ನಾಟಕ ಸರ್ಕಾರದ 2026ರ "ಬಜೆಟ್ ಪೇ ಚರ್ಚಾ" ಕಾರ್ಯಕ್ರಮದ ಉದ್ಘಾಟಕರಾದ ಶರಣಬಸವೇಶ್ವರ ವಾಣಿಜ್ಯ ಪದವಿ ಮಹಾವಿದ್ಯಾಲಯ ಕಲಬುರ್ಗಿಯ ಪ್ರಾಂಶುಪಾಲರಾದ ಡಾ. ದಶರಥ ಮೇತ್ರಿ ಅವರು ಮೇಲಿನಂತೆ ನೋಡಿದರು.

2026–27ನೇ ಸಾಲಿನ ಕರ್ನಾಟಕ ಬಜೆಟ್, 'ಸರ್ವರ ಸಬಲೀಕರಣ ಮತ್ತು ನವ ಕರ್ನಾಟಕದ ನಿರ್ಮಾಣ'ದ ಗುರಿಯನ್ನು ಹೊಂದಿದೆ. 4.48 ಲಕ್ಷ ಕೋಟಿ ಗಾತ್ರದ ಈ ಬಜೆಟ್, ಕೃಷಿ, ನೀರಾವರಿ, ಮಹಿಳಾ ಸಬಲೀಕರಣ, ಮತ್ತು ತಂತ್ರಜ್ಞಾನಕ್ಕೆ ಒತ್ತು ನೀಡುವುದರ ಜೊತೆಗೆ, ಸಮುದಾಯಗಳ ಆರ್ಥಿಕಾಭಿವೃದ್ಧಿಗಾಗಿ ಮಂಡಿಸಿದೆ

ರಾಜ್ಯದ ಜಿಎಸ್‌ಡಿಪಿ (ಉಖಆಕ) ಬೆಳವಣಿಗೆ ದರವು ಶೇ. 8.1ರಷ್ಟು ಬಲವಾಗಿದ್ದು, ಕೈಗಾರಿಕೆ ಮತ್ತು ಸೇವಾ ವಲಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ ಕಲ್ಯಾಣ ಕರ್ನಾಟಕಕ್ಕೆ ಪ್ರತ್ಯೇಕವಾಗಿ 5000 ಕೋಟಿ ರೂಪಾಯಿ ಮೀಸಲಿಡಲಾಗಿದೆ. ಪಂಚ ಗ್ಯಾರಂಟಿಗಳ ಮೂಲಕ ಜನರ ಪ್ರಗತಿಯನ್ನು ಮತ್ತು ಅಭಿವೃದ್ಧಿ ಸಾಧ್ಯವಾಗುತ್ತದೆ ಇಂತಹ ವಿಷಯಗಳು ವಿದ್ಯಾರ್ಥಿಗಳು ಅರಿವುದರ ಮೂಲಕ ಅವರ ಬುದ್ಧಿಮಟ್ಟವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗುತ್ತದೆ ಎಂದರು.

ಸಮಾರಂಭದ ಮುಖ್ಯ ಅತಿಥಿಗಳಾದ ಕೆಪಿಇ ಸಂಸ್ಥೆಯ ಆಡಳಿತ ಅಧಿಕಾರಿಗಳಾದ ಡಾ. ಚಂದ್ರಶೇಖರ ಶೀಲವಂತ ಅವರು ಮಾತನಾಡುತ್ತಾ ಭಾರತ ದೇಶವು ಜಗತ್ತಿನ ನಾಲ್ಕನೇ ಅತಿದೊಡ್ಡ ಆರ್ಥಿಕ ರಾಷ್ಟ್ರವಾಗಿದೆ ಮುಂದಿನ ದಿನಗಳಲ್ಲಿ ಜಗತ್ತಿನ ಎರಡನೇ ಅತಿದೊಡ್ಡ ಆರ್ಥಿಕ ರಾಷ್ಟ್ರವಾಗಲಿದೆ ಎಂದರು.

ಸಮಾರಂಭದ ಅಧ್ಯಕ್ಷತೆಯನ್ನು ಕೆಪಿಇ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳು ಶಾಂತಪ್ಪ ಸೂರನ್ ಅವರು ವಹಿಸಿದ್ದರು.

ಬಜೆಟ್ ಪೇ ಚರ್ಚಾ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ದೀಪಿಕಾ ವಿ, ಶರಣಬಸವೇಶ್ವರ ಕಲಾ ಮಹಾವಿದ್ಯಾಲಯ ಕಲಬುರಗಿ, ದ್ವಿತೀಯ ಬಹುಮಾನ ಭಾಗಪ್ಪ ಡಾ. ಅಂಬೇಡ್ಕರ್ ಪದವಿ ಮಹಾವಿದ್ಯಾಲಯ, ಕಲಬುರಗಿ, ತೃತೀಯ ಬಹುಮಾನ ಅನ್ನಪೂರ್ಣ ಗೊದುತಾಯಿ ಪದವಿಮ ವಿದ್ಯಾಲಯ ಮತ್ತು ವೈಷ್ಣವಿ ಪೂಜಾರಿ ಸೇಟ್ ಶಂಕರ್ ಕಾನೂನು ಕಾಲೇಜ್ ವಿದ್ಯಾರ್ಥಿಗಳು ಬಹುಮಾನ ಪಡೆದಿದ್ದಾರೆ. ನಿರ್ಣಾಯಕರಾಗಿ ಡಾ. ಶಿಲ್ಪಾ ಗಾಂವ್ಕರ್, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮಹಾಗಾಂವ್ ಕ್ರಾಸ್, ಡಾ. ವಿಕಾಸ್ ಎಸ್ ಬಿಸಿಎಸ್ ಪದವಿ ಮಹಾವಿದ್ಯಾಲಯ, ಹುಮ್ನಾಬಾದ್ ಭಾಗವಹಿಸಿ ಉತ್ತಮ ನಿರ್ಣಯ ನೀಡಿದ್ದಾರೆ. ವೇದಿಕೆಯ ಮೇಲೆ ಕಾಲೇಜಿನ ಪ್ರಾಚಾರ್ಯರಾದ ಡಾ. ಸಿದ್ದಪ್ಪಾ ಎಂ. ಕಾಂತಾ, ಐಕ್ಯೂಎಸಿಯ ಸಂಯೋಜಕರಾದ ಡಾ, ಸಿದ್ದಾರ್ಥ್ ಮದನ್ಕರ್ ಉಪಸ್ಥಿತರಿದ್ದರು, ಅರ್ಥಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ನಿರ್ಮಲಾ ಸಿರಗಾಪುರ್ ಸ್ವಾಗತ ಮತ್ತು ಪ್ರಾಸ್ತಾನಿಕ ಮಾತನಾಡಿದರು.

ಸಮಾರಂಭದಲ್ಲಿ ಕಾಲೇಜಿನ ಪ್ರಾಧ್ಯಾಪಕರಾದ ಡಾ. ಅರುಣ್ ಜೋಳದಕೂಡ್ಲಿಗಿ, ಡಾ. ಸುದರ್ಶನ್ ಮದನ್ಕರ್ ಡಾ. ಶಿವಕುಮಾರ್, ಡಾ. ವಸಂತ ನಾಶಿ,ಡಾ.ಹರ್ಷವರ್ಧನ ಬಿ, ಡಾ. ಕರಬಸಪ್ಪ ಮೂಲಗೆ ಮತ್ತು ಗ್ರಂಥಪಾಲಕರದ ರಮೇಶ್ ಜಾಬ್ಶೂರ್ ಭಾಗವಹಿಸಿದ್ದರು. ಡಾ. ದತ್ತುರಾಯ ಶಿವರಾಜ ನಿರೂಪಿಸಿದರು ಡಾ. ಗಾಂಧೀಜಿ ಮೋಳಕೆರೆ ವಂದಿಸಿದರು.

# ಸಮಾರೋಪ ಸಮಾರಂಭ




**ಲಕ್ಷ್ಮೇಶ್ವರ,ಏ4:** ಪಟ್ಟಣದ ಜಗದ್ಗುರು ವೀರ ಗಂಗಾಧರ ಸಮುದಾಯ ಭವನದಲ್ಲಿ ಪಂಡಿತ ದೀನದಯಾಳ ಉಪಾಧ್ಯಾಯ ಪ್ರಶಿಕ್ಷಣ ಮಹಾ ಅಭಿಯಾನ 2026 ಶಿರಹಟ್ಟಿ ಮಂಡಲ ಬಿಜೆಪಿ ವತಿಯಿಂದ ಎರಡು ದಿನಗಳ ಈ ಅಭಿಯಾನದ ಸಮಾರೋಪ ಜರುಗಿತು.

ಈ ಸಂದರ್ಭದಲ್ಲಿ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ಮಹಾಪೌರರಾದ ಜ್ಯೋತಿ ಪಾಟೀಲ್ ಅವರು ಕಾರ್ಯ ವಿಸ್ತರಣೆ ಮತ್ತು ನಮ್ಮ ದೃಷ್ಟಿಕೋನ ಈ ಕುರಿತು ಕಾರ್ಯಕರ್ತರಿಗೆ ಸಮಗ್ರ ಮಾಹಿತಿ ನೀಡಿದರು.

ಬಿಜೆಪಿ ಯುವ ಮೋರ್ಚಾದ ಮಲ್ಲಿಕಾರ್ಜುನ್ ಬಾಳಿಕಾಯಿಯವರು ಬಿಜೆಪಿ ಇತಿಹಾಸ ಮತ್ತು ವಿಕಾಸದ ಕುರಿತು ಮಾತನಾಡಿದರು ನಮ್ಮ ಕಾರ್ಯ ಇವುಗಳ ಕುರಿತು ಶಶಿಧರ್ ಹೊಸಳ್ಳಿ ಸೈದ್ಧಂತಿಕ ಅಧಿಷ್ಠಾನ ಕುರಿತು ಗದಗ ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಮೋಹನ್ ಮಾಳ ಶೆಟ್ಟಿ ವಿಷಯ ಪ್ರಸ್ತಾಪಿಸಿದರು. ಕಾರ್ಯಕ್ರಮದಲ್ಲಿ ಶಿರಹಟ್ಟಿ ಮಂಡಲ ಬಿಜೆಪಿ ಅಧ್ಯಕ್ಷ ಸುನಿಲ ಮಹಾಂತ ಶೆಟ್ಟರ ಗದಗ ಜಿಲ್ಲಾ ಬಿಜೆಪಿ ರೈತ ಮೋರ್ಚಾ ಅಧ್ಯಕ್ಷ ಬಸವರಾಜ್ ಇಟಗಿ ಗಂಗಾಧರ ಮೆಣಸಿನಕಾಯಿ ಸೋಮಣ್ಣ ಉಪನಾಳ ವಿಜಯ ಕುಂಬಾರ ಪ್ರವೀಣ್ ಬೋಮಲೆ ನವೀನ್ ಹಿರೇಮಠ ಸೇರಿದಂತೆ ಅನೇಕರಿದ್ದರು.

# ಕಾರು ಬಾವಿಗೆ ಬಿದ್ದು 9 ಸಾವು



**ನಾಸಿಕ್, ಏ.4:** ಮಹಾರಾಷ್ಟ್ರದ ನಾಸಿಕ್ ಜಿಲ್ಲೆಯಲ್ಲಿ ನೀರು ತುಂಬಿದ ಬಾವಿಗೆ ಕಾರು ಉರುಳಿ ಬಿದ್ದ ಪರಿಣಾಮ ಆರು ಮಕ್ಕಳು ಸೇರಿದಂತೆ ಒಂದೇ ಕುಟುಂಬದ ಒಂಬತ್ತು ಸದಸ್ಯರು ಜಲಸಮಾಧಿಯಾಗಿದ್ದಾರೆ.

ತಡ ರಾತ್ರಿ 11:30 ರ ಸುಮಾರಿಗೆ ನಾಸಿಕ್ ನಿಂದ 40 ಕಿ.ಮೀ ದೂರದಲ್ಲಿರುವ ದಿಂಡೋರಿ ತಾಲ್ಲೂಕಿನಲ್ಲಿ ಕುಟುಂಬವು ವಾರ್ಷಿಕ ಸಮಾರಂಭದಲ್ಲಿ ಭಾಗವಹಿಸಿ ಮನೆಗೆ ಹಿಂತಿರುಗುತ್ತಿದ್ದಾಗ ಈ ಅಪಘಾತ ಸಂಭವಿಸಿದೆ.

ಇಂದೋರ್ ಗ್ರಾಮದ ಕುಟುಂಬವು ಶಿವಾಜಿನಗರದ ಔತಣಕೂಟ ಸಭಾಂಗಣದಲ್ಲಿ ನಡೆದ ಸಾಮಾಜಿಕ ಕಾರ್ಯಕ್ರಮದಲ್ಲಿ ಭಾಗವಹಿಸಿತ್ತು. ಸಮಾರಂಭದ ನಂತರ ಸುನಿಲ್ ದತ್ತಾತ್ರೇಯ ದರ್ಗೋಡ್ ಅವರು ಕುಟುಂಬದೊಂದಿಗೆ ವಾಹನ ಚಾಲನೆ ಮಾಡುತ್ತಿದ್ದಾಗ ನಿಯಂತ್ರಣ ತಪ್ಪಿದ ಕಾರು ರಸ್ತೆಯಿಂದ ಹತ್ತಿರದ ನೀರು ತುಂಬಿದ ಬಾವಿಗೆ ಬಿದ್ದಿದೆ. ತಪ್ಪಿಸಿಕೊಳ್ಳಲು ಕಡಿಮೆ ಅವಕಾಶವಿದ್ದ ಕಾರಣ ಕಾರಿನಲ್ಲಿದ್ದವರೆಲ್ಲಾ ಮೃತಪಟ್ಟಿದ್ದಾರೆ ಎಂದು ಸ್ಥಳೀಯರು ಹೇಳಿದ್ದಾರೆ.

ರಕ್ಷಣಾ ಕಾರ್ಯಾಚರಣೆಗೆ ಅಡ್ಡಿಯಾಗಿದೆ: ಘಟನೆ ನಡೆದ ಕೂಡಲೇ ಅಗ್ನಿಶಾಮಕ ತಂಡಗಳು ಸ್ಥಳಕ್ಕೆ ಧಾವಿಸಿದವು. ಪೊಲೀಸ್, ಸ್ಥಳೀಯ ಆಡಳಿತ, ಅಗ್ನಿಶಾಮಕ ದಳ, ವಿಪತ್ತು ನಿರ್ವಹಣಾ ತಂಡಗಳು ಮತ್ತು ನಂತರ ಎನ್ ಡಿಆರ್ ಎಫ್ ರಕ್ಷಣಾ ಕಾರ್ಯದಲ್ಲಿ ತೊಡಗಿಸಿಕೊಂಡವು. ಆದಾಗ್ಯೂ, ಸಂಪೂರ್ಣವಾಗಿ ನೀರಿನಿಂದ ತುಂಬಿದ ಬಾವಿಯು ಕಾರ್ಯಾಚರಣೆಯನ್ನು ಕಷ್ಟಕರವಾಗಿಸಿದೆ. ಕ್ರೇನ್ ಗಳನ್ನು ಬಳಸಿ ವಾಹನವನ್ನು ಹೊರತೆಗೆಯಲು ಗಂಟೆಗಳು ಬೇಕಾಯಿತು.

ಕಾರಿನಿಂದ ಒಂಬತ್ತು ಶವಗಳನ್ನು ಹೊರತೆಗೆಯಲಾಗಿದ್ದು, ವಾಹನದಿಂದ ಹೊರಬಂದು ಬಾವಿಯಲ್ಲಿ ಮುಳುಗಿದ್ದ ಮತ್ತೊಬ್ಬ ಬಾಲಕಿಯನ್ನು ಪತ್ತೆಹಚ್ಚಲು ಪ್ರತ್ಯೇಕ ಶೋಧ ಕಾರ್ಯಾಚರಣೆಯನ್ನು ಪ್ರಾರಂಭಿಸಲಾಗಿದೆ.

ಮೃತರೆಲ್ಲರೂ ಒಂದೇ ಕುಟುಂಬ: ಅಪಘಾತದಲ್ಲಿ ಮೃತಪಟ್ಟವರಲ್ಲಿ ಸುನಿಲ್ ದತ್ತಾತ್ರೇಯ ದರ್ಗೋಡೆ (34), ಅವರ ಪತ್ನಿ ರೇಷ್ಮಾ (30), ಅವರ ಮಗಳು ರಾಖಿ ಅಲಿಯಾಸ್ ಗುನ್ವಂತಿ (10), ಸೋದರ ಸೊಸೆಯಂದಿರಾದ ಮಾಧುರಿ (13) ಮತ್ತು ಶ್ರಾವಣಿ (11) ಸೇರಿದ್ದಾರೆ.ಮೃತರಲ್ಲಿ ಆಶಾ ಅನಿಲ್ ದರ್ಗೋಡೆ (32), ಅವರ ಮಗ ಶ್ರೇಯಶ್ (11), ಮಗಳು ಸೃಷ್ಟಿ (14) ಮತ್ತು ಸೋದರ ಸೊಸೆ ಸಮೃದ್ಧಿ (7) ಸೇರಿದ್ದಾರೆ. ಮೃತರೆಲ್ಲರೂ ಒಂದೇ ವಿಸ್ತೃತ ಕುಟುಂಬಕ್ಕೆ ಸೇರಿದವರಾಗಿದ್ದು, ಮೃತ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ತಡರಾತ್ರಿಯವರೆಗೆ ಶವಗಳನ್ನು ಹೊರತೆಗೆಯುತ್ತಿದ್ದಂತೆ ಭಾವನಾತ್ಮಕ ದೃಶ್ಯವನ್ನು ಪ್ರತ್ಯಕ್ಷದರ್ಶಿಗಳು ವಿವರಿಸಿದ್ದಾರೆ. ಹಲವಾರು ಮಕ್ಕಳು ಕಾರ್ಯಕ್ರಮಕ್ಕೆ ವೇಷಭೂಷಣಗಳನ್ನು ಧರಿಸಿದ್ದನ್ನು ನೋಡಿ ರಕ್ಷಣಾ ಸಿಬ್ಬಂದಿ ಮತ್ತು ಸ್ಥಳೀಯರು ಕಣ್ಣೀರು ಹಾಕಿದರು.ಪೊಲೀಸರಿಂದ ತನಿಖೆ ಆರಂಭ: ದಿಂಡೋರಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಅಪಘಾತದ ಬಗ್ಗೆ ತನಿಖೆ ಆರಂಭಿಸಿದ್ದಾರೆ. ಆರಂಭಿಕ ಸೂಚನೆಗಳು ಚಾಲಕನ ನಿಯಂತ್ರಣವನ್ನು ಕಳೆದುಕೊಂಡಿವೆ, ಆದರೂ ಹೆಚ್ಚಿನ ವಿವರಗಳಿಗಾಗಿ ಕಾಯಲಾಗುತ್ತಿದೆ.

# ರಂಗಭೂಮಿ ಶ್ರೀಮಂತಿಕೆಗೆ ಗ್ರಾಮೀಣ ಪ್ರದೇಶದ ಕೊಡುಗೆ ಅನನ್ಯ : ರಾಜಕುಮಾರ್ ಪಾಟೀಲ್ ತೇಲ್ಕೂರ್



**ಸೇಡಂ ,ಏ,04:** ಇವತ್ತಿಗೂ ಜೀವಂತವಾಗಿರುವ ರಂಗಭೂಮಿಯ ಶ್ರೀಮಂತಿಕೆಗೆ ಗ್ರಾಮೀಣ ಪ್ರದೇಶದ ಕೊಡುಗೆ ಅನನ್ಯವಾಗಿದೆ ಎಂದು ಸೇಡಂ ಕ್ಷೇತ್ರದ ಮಾಜಿ ಶಾಸಕರಾದ ರಾಜಕುಮಾರ ಪಾಟೀಲ ತೇಲ್ಕೂರ್ ಹೇಳಿದರು.

ಮಳಖೇಡ ಗ್ರಾಮದ ಸಮೀಪದಲ್ಲಿರುವ ಮಲಕೂಡ ಗ್ರಾಮದಲ್ಲಿ ಶ್ರೀ ಸೋಮೇಶ್ವರ ಜಾತ್ರಾ ಮಹೋತ್ಸವದ ನಿಮಿತ್ತವಾಗಿ ಮೂರು ದಿನಗಳ ನಾಟಕೋತ್ಸವದ ಮೊದಲನೆ ದಿನದ ಪ್ರದರ್ಶನದ ಅಂಗವಾಗಿ ರಂಗಭೂಮಿ ಪೂಜೆ ಮಾಡಿ ಮಾತನಾಡಿದ ಅವರು, ಹಿರಿಯ ನಾಟಕಕಾರ ಶರಣಪ್ಪ ಹೂಗಾರ ಬರೆದ ಹತ್ತೂರ ಒಡೆಯ ನಾಟಕವು ಅನ್ನದಾತ ಸುಖಿಭವ ಎನ್ನುವಂತೆ, ರೈತ ಸಂಕುಲದ ಕುರಿತು ಬರೆಯಲಾಗಿದೆ. ಹಾಗೆಯೇ ಸಂವಿಧಾನದ ಕೆಲ ಕಾಯ್ದೆಗಳ ಕುರಿತು ಜನಜಾಗೃತಿ ಮಾಡುವ ನಿಟ್ಟಿನಲ್ಲಿ ನಾಟಕವು ಜನರ ಮನಸನ್ನು ಸೆಳೆಯಲಿದೆ ಎಂದರು.ಇನ್ನೋರ್ವ ಮುಖಂಡ ಮಣಿಕಂಠ ರಾಠೋಡ ಮಾತನಾಡಿದರು.ನಾಟಕಕಾರ ಶರಣಪ್ಪ ಹೂಗಾರ,ನಿರ್ದೇಶಕ ಮಹಿಪಾಲರೆಡ್ಡಿ ಸೇಡಂ ಹಾಗೂ ಮುಖಂಡರಾದ ಜಿಪಂ ಮಾಜಿ ಸದಸ್ಯ ಗುಂಡಣ್ಣ ಬಾಳಿ, ಹಿರಿಯ ಸಾಹಿತಿಗಳಾದ ಡಾ. ಎಂ.ಜಿ. ದೇಶಪಾಂಡೆ, ನಾಗರಾಜ ಪಾಟೀಲ್ ತೊಟ್ನಳ್ಳಿ, ಓಂಪ್ರಕಾಶ ಪಾಟೀಲ್, ಗುರುನಾಥ್ ತಳಕಿನ ಮಳಖೇಡ, ಸೇರಿದಂತೆ ಅನೇಕರು ವೇದಿಕೆಯಲ್ಲಿದ್ದರು.ಶ್ರೀ ಸೋಮೇಶ್ವರ ಮಠದ ಗುರುಲಿಂಗ ಶಿವಾಚಾರ್ಯರು, ಸೋಮೇಶ್ವರ ನಾಟ್ಯ ಸಂಘದ ಸೋಮಶೇಖರ ಪಾಟೀಲ್,ಸಿದ್ದು ಸಾಹು ಬಾಳಿ,ಸುರೇಶ್ ಸಿದ್ದಲಿಂಗಗೌಡ, ಚಂದು ಮಹಾರಾಜ್, ರಮೇಶ್ ಮಾಲಿಪಾಟೀಲ್ ಸೇರಿದಂತೆ ಇತರರು ಇದ್ದರು.

# ಬೇಸಿಗೆಯಲ್ಲಿ ಆರೋಗ್ಯದ ಮುಂಜಾಗ್ರತೆ ವಹಿಸಿ



**ಕಲಬುರಗಿ:ಏ.4:** ಈಗಾಗಲೇ ಬಿಸಿಲಿನ ತಾಪ ಹೆಚ್ಚಾಗಿದೆ. ಬೇಸಿಗೆ ದಿನಗಳಲ್ಲಿ ವಾತಾವರಣದಲ್ಲಿ ಸಾಕಷ್ಟು ಬದಲಾವಣೆಗಳಾಗಿ, ಉಷ್ಣಾಂಶದಲ್ಲಿ ಏರಿಕೆಯಾಗುವುದರಿಂದ ಅದರ ಪರಿಣಾಮವು ಮಾನವನ ದೇಹದ ಮೇಲೆ ನೇರವಾಗಿ ಬೀರುತ್ತದೆ. ಆದ್ದರಿಂದ ಆರೋಗ್ಯದಲ್ಲಿ ಏರು-ಪೇರುಗಳಾಗುವದರಿಂದ ಪ್ರತಿಯೊಬ್ಬರು ಮುನ್ನೆಚ್ಚರಿಕೆಗಳನ್ನು ವಹಿಸಿಕೊಂಡು, ದೇಹದ ರಕ್ಷಣೆಯನ್ನು ಮಾಡಿಕೊಳ್ಳಬೇಕೆಂದು ವೈದ್ಯಾಧಿಕಾರಿ ಡಾ.ಅನುಪಮಾ ಎಸ್.ಕೇಶ್ವಾರ ಸಲಹೆ ನೀಡಿದರು.

ನಗರದ ಶೇಖರೋಜಾದಲ್ಲಿರುವ ಶಹಾಬಜಾರ 'ನಗರ ಪ್ರಾಥಮಿಕ ಆರೋಗ್ಯ ಕೇಂದ'ದಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಗುರುವಾರ ಏರ್ಪಡಿಸಿದ್ದ 'ಬೇಸಿಗೆಯ ಆರೋಗ್ಯದ ಮುಂಜಾಗ್ರತೆ ಕಾರ್ಯಕ್ರಮ'ದಲ್ಲಿ ಅವರು ಮಾತನಾಡುತ್ತಿದ್ದರು.

ಬೇಸಿಗೆ ದಿವಸಗಳಲ್ಲಿ ಉಷ್ಣಾಂಶದ ಹೆಚ್ಚಾಗಿರುವದರಿಂದ ಬೆವರಿನ ಉತ್ಪಾದನೆಯ ಪ್ರಮಾಣ ಜಾಸ್ತಿಯಾಗಿರುತ್ತದೆ. ಆಗ ದೇಹದಲ್ಲಿ ನೀರಿನ ಅಂಶ ಕಡಿಮೆಯಾಗಿ ದೇಹ ಬಿಸಿಯಾಗುತ್ತದೆ. ಆದ್ದರಿಂದ ಆಗಾಗ್ಗೆ ಸ್ವಲ್ಪ-ಸ್ವಲ್ಪ ನೀರು ಕುಡಿಯುತ್ತಿರಬೇಕು. ಹೊರಗಡೆ ತಿರುಗಾಡುವ ಸಮಯದಲ್ಲಿ ತಲೆ, ಮೈ-ಕೈಯನ್ನು ಬಿಳಿ ವಸ್ತ್ರದಿಂದ ರಕ್ಷಿಸಬೇಕು. ಈ ದಿನಗಳಲ್ಲಿ ತಲೆನೋವು, ಆಮಶಂಕೆ, ಸುಸ್ತು, ಉಷ್ಣ ಗುಳ್ಳೆಯಂತಹ ಸಾಮಾನ್ಯ ಕಾಯಿಲೆಗಳು ಉಂಟಾಗುತ್ತವೆ. ಆದ್ದರಿಂದ ಶುದ್ಧ, ಸ್ವಚ್ಚವಾದ ನೀರು, ಆಹಾರ ಸೇವಿಸಬೇಕು. ನಿಯಮಿತವಾಗ ವಿಶ್ರಾಂತಿ ಪಡೆಯಬೇಕು. ತಂಪು ಪಾನೀಯಗಳ ಬದಲಾಗಿ ಎಳೆ ನೀರು, ನಿಂಬೆ ಸೇರಿದಂತೆ ವಿವಿಧ ಹಣ್ಣಿನ ರಸ ಸ್ವೀಕರಿಸಬೇಕೆಂದು ಅನೇಕ ಸಲಹೆ ಹಾಗೂ ಸೂಚನೆಗಳನ್ನು ನೀಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಬಳಗದ ಅಧ್ಯಕ್ಷ ಎಚ್.ಬಿ.ಪಾಟೀಲ್, ವೈದ್ಯರು ಸೂಚಿಸಿದ ಸಲಹೆ-ಸೂಚನಗೆಳನ್ನು ಪಾಲಿಸಿ, ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಸಮಾಜ ಸೇವಕ ಶಿವಯೋಗೆಪ್ಪಾ ಎಸ್.ಬಿರಾದಾರ, ಆರೋಗ್ಯ ಕೇಂದ್ರದ ಸಿಬ್ಬಂದಿಗಳಾದ ಗಂಗಾಜ್ಯೋತಿ ಗಂಜಿ, ಮಂಗಲಾ ಚಂದಾಪೂರೆ, ಜಗನ್ನಾಥ ಗುತ್ತೇದಾರ, ನಾಗೇಶ್ವರಿ ಮುಗಳಿವಾಡಿ, ಶ್ರೀದೇವಿ, ರೇಷ್ಮಾ ನಕ್ಕುಂದಿ, ಚಂದ್ರಕಲಾ ಮಠಪತಿ, ಸಂಗಮ್ಮ ಅತನೂರ, ಲಕ್ಷ್ಮೀ ಮೈಲಾರಿ, ಮರಲಿಂಗಮ್ಮ, ನಾಗಮ್ಮ ಚಿಂಚೋಳಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಕಠಿಣ ಪರಿಶ್ರಮವೇ ಯಶಸ್ಸಿನ ತಳಹದಿ : ಜಯಲಕ್ಷ್ಮಿ ರಾಯಕೋಡ



**ಸೇಡಂ,ಏ,04 :** ಒಬ್ಬ ವ್ಯಕ್ತಿ ತಾನು ಅಂದುಕೊಂಡಿದ್ದನ್ನು ಸಾಧಿಸಬೇಕಾದರೆ ಕಠಿಣ ಪರಿಶ್ರಮ ಪಡಬೇಕು.ಒಬ್ಬ ಹೆಣ್ಣು ಮಗಳು ಕಠಿಣ ಪರಿಶ್ರಮ ಪಡುತ್ತಿರುವ ಸಂದರ್ಭದಲ್ಲಿ ಅವಮಾನಗಳು ಸಹಜವಾಗಿ ಬರುತ್ತವೆ ಅವಮಾನಗಳನ್ನು ಸನ್ಮಾನಗಳಾಗಿ ಪರಿವರ್ತನೆ ಮಾಡಬೇಕಾದರೆ ಕಠಿಣ ಪರಿಶ್ರಮ ಮುಖ್ಯ ಎಂದು ಉಪ ಕಾರ್ಯದರ್ಶಿಗಳು ಜಿಲ್ಲಾ ಪಂಚಾಯತ್ ದಕ್ಷಿಣಕನ್ನಡ ಶ್ರೀಮತಿ ಜಯಲಕ್ಷ್ಮಿ ರಾಯಕೋಡ ಕೆಎಎಸ್ ಹೇಳಿದರು.ಪಟ್ಟಣದಲ್ಲಿರುವ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶ್ರೀ ಕೊತ್ತಲ ಬಸವೇಶ್ವರ ಭಾರತೀಯ ಶಿಕ್ಷಣ ಸಮಿತಿ ಸಂಚಾಲಿತ ಶ್ರೀಮತಿ ನರ್ಮದಾದೇವಿ ಗಿಲಡಾ ಸರ್ವ ಪ್ರಕಲ್ಪಗಳ ಸಂಕುಲ ವತಿಯಿಂದ ಹಮ್ಮಿಕೊಂಡಿರುವ ಉನ್ನತ ಧ್ಯೇಯ ಉನ್ನತ ಮಹಿಳೆ ಎಂಬ ವಿಶೇಷ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಮಾತನಾಡಿದ ಅವರು ಈ ಶಿಕ್ಷಣ ಸಂಸ್ಥೆಯ ಹಿರಿಯ ವಿದ್ಯಾರ್ಥಿ ತಾವು ರಾಯಕೋಡ ಗ್ರಾಮದಲ್ಲಿ ಜನಿಸಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿಯಾಗಿ ಸೇವೆಸಲ್ಲಿಸಲು ಕೊತ್ತಲ ಬಸವೇಶ್ವರ ಸಂಸ್ಥೆ ನೀಡಿದ ಶಿಕ್ಷಣ ಮತ್ತು ಸಂಸ್ಕಾರವೇ ಕಾರಣ ಎಂದು ಸಂಸ್ಥೆಗೆ ಕೃತಜ್ಞತೆಗಳು ಸಲ್ಲಿಸಿದರು. ಶಿಕ್ಷಣ ಪಡೆಯುವ ಸಂದರ್ಭದಲ್ಲಿನ ಅನುಭವಗಳನ್ನು ಹಂಚಿಕೊಳ್ಳುತ್ತಾ ಓದುವುದರ ಜೊತೆಗೆ ಬರವಣಿಗೆ ಬಹಳ ಮಹತ್ವ ನೀಡಬೇಕು.ಇಂದಿನ ತಾಂತ್ರಿಕ ಕಾಲದಲ್ಲಿ ಬರವಣಿಗೆ ಕಡಿಮೆಯಾಗುತ್ತಿದೆ.ಆದರೆ ಬರವಣಿಗೆ ಇಲ್ಲದೆ ಪಡೆದ ಶಿಕ್ಷಣ ಅರ್ಥಪೂರ್ಣವಾಗಲಾರದು. ಇಂದು ಸ್ಮಾರ್ಟ್ ಫೊ?ನ್ ಬಳಕೆಯಿಂದ ಕಲಿಕೆಯಿಂದ ದುಷ್ಪರಿಣಾಮ ಬೀರುತ್ತದೆ ಆದರಿಂದ ಫೊ?ನ್ ಬಳಕೆಯಿಂದ ದೂರವಿರಲು ಸೂಚಿಸಿದರು. ಪ್ರೌಢಶಾಲೆಯಿಂದಲೇ ಮಕ್ಕಳಲ್ಲಿ ಸ್ಪರ್ಧಾತ್ಮಕ ಮನೋಭಾವನೆ ಮೂಡಿಸಿಕೊಳ್ಳಬೇಕು ಎಂದರು.ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾದ ಶ್ರೀ ಅನಿಲಕುಮಾರ ಬುಳ್ಳಾ ಅವರು ಮಾತಾಡುತ್ತಾ ಹೆಣ್ಣು ಮನಸು ಮಾಡಿದರೆ ಅವಳು ಏನು ಬೇಕಾದರೂ ಸಾಧಿಸುತ್ತಾಳೆ, ಎಂಬಂತೆ ಹೆಣ್ಣು ಛಲ, ಧೈರ್ಯ,ಸಾಹಸ ಮತ್ತು ಕಾರ್ಯಗಳಲ್ಲಿ ಪುರುಷನಿಗೆ ಯಾವುದಕ್ಕೂ ಕಡಿಮೆಯಿಲ್ಲ ಅದಕ್ಕಾಗಿ ಹೆಣ್ಣು ಮಕ್ಕಳು ಸತತ ಅಭ್ಯಾಸ, ನಿರ್ಧಿಷ್ಟ ಗುರಿ ಇಟ್ಟುಕೊಂಡು ಅಧ್ಯನಗೈದರೆ ಯಶಸ್ಸು ಕಟ್ಟಿಟ್ಟ ಬುತ್ತಿ ಎಂದು ಹೇಳಿದರು. ಅಲ್ಲದೆ ಐಎಎಸ್ ಮತ್ತು ಕೆಎಎಸ್ ಕುರಿತು ಮಾಹಿತಿ ನೀಡಿದರು.ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಬಾಪು ಬಿ ಜೋಷಿ ಅವರು ಉನ್ನತ ಮಹಿಳೆಯರ ಗುಣಗಳು ಪ್ರತಿಯೊಬ್ಬ ಮಹಿಳೆಯರು ಅಳವಡಿಸಿಕೊಳ್ಳಬೇಕು ಎಂದರು. ಕಾರ್ಯದರ್ಶಿಗಳಾದ ಶ್ರೀಮತಿ ಅನುರಾಧ ಪಾಟೀಲ ಕಾರ್ಯಕ್ರಮದ ಅಧ್ಯಕ್ಷತೆಯ ಮಾತನಾಡಿದ ಅವರು ಬದುಕಿನಲ್ಲಿ ಯಶಸ್ಸು ಕಾಣಬೇಕಾದರೆ, ಮುಖ್ಯ ಅತಿಥಿಗಳು, ಸಂಪನ್ಮೂಲ ವ್ಯಕ್ತಿಗಳು ನೀಡಿರುವ ಸಲಹೆಗಳು ಮತ್ತು ಯಶಸ್ಸಿಗಾಗಿ ಮಾಡುವ ಪ್ರಯತ್ನಗಳು ತಾವು ತಮ್ಮ ವಿದ್ಯಾರ್ಥಿ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕೆಂದರು ಎಂದರು.ಕಾರ್ಯಕ್ರಮದಲ್ಲಿ ಸಾಧನೆಗೈದ ಮತ್ತು ಸರ್ಕಾರಿ ಉದ್ಯೋಗವನ್ನು ಪಡೆದ ಹಿರಿಯ ವಿದ್ಯಾರ್ಥಿನಿಯರಿಗೆ ಸನ್ಮಾನ ಮಾಡಲಾಯಿತು.ಶ್ರೀಮತಿ ನಾಗಜ್ಯೋತಿ ಕಡಬಗಾಂವ ಪ್ರಧಾನ ಅಧ್ಯಾಪಕರು ಪ್ರಾಸ್ತಾವಿಕ.ಶ್ರೀಮತಿ ಜಗದೀಶ್ವರಿ ಯರಗೋಳ ನಿರೂಪಣೆ,ಶಿವಲೀಲಾ ಜೀವಣಗಿ ಪ್ರಾರ್ಥನಾ ಗೀತೆ ಶ್ರೀಮತಿ ಆರತಿ ಕಡಗಂಚಿ ಸ್ವಾಗತ.ಶ್ರೀಮತಿ ಅನಂತಮ್ಮ ರೆಡ್ಡಿ ಸಾಧಕ ಸನ್ಮಾನ ಪಟ್ಟಿ ವಾಚನ,ಶ್ರೀಮತಿ ವಿಜಯಲಕ್ಷ್ಮಿ ವಂದನಾರ್ಪಣೆಗೈದರು.

ಸಂಸ್ಥೆಯ ಪದಾಧಿಕಾರಿಗಳು,ಆಡಳಿತಾಧಿಕಾರಿಗಳು,ಶೈಕ್ಷಣಿಕ ಸಂಯೋಜಕರು, ಸಂಸ್ಥೆಯ ಹಿರಿಯ ಸೇವಾಬಳಗ, ಪಾಲಕರು, ಸೇವಾಬಳಗ ಮತ್ತು ವಿದ್ಯಾರ್ಥಿನಿಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

# ಅಕಾಲಿಕ ಮಳೆ:ಬೆಳೆ ಹಾನಿ ಸಮೀಕ್ಷೆಗೆ ಎಂಬಿಪಿ ಸೂಚನೆ



**ವಿಜಯಪುರ, ಎ. 4:** ಜಿಲ್ಲೆಯಲ್ಲಿ ಗುರುವಾರ ಸುರಿದ ಅಕಾಲಿಕ ಮಳೆಯಿಂದಾಗಿ ಉಂಟಾಗಿರುವ ದ್ರಾಕ್ಷಿ ಬೆಳೆ ಹಾನಿಯ ಕುರಿತು ಕೂಡಲೇ ಸಮೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ.

ಮಾರ್ಚ್ ತಿಂಗಳಲ್ಲಿ ಆಲಿಕಲ್ಲು ಮತ್ತು ಬಿರುಗಾಳಿ ಸಹಿತ ಮಳೆ ಸುರಿದ ಪರಿಣಾಮ ದ್ರಾಕ್ಷಿ ಸೇರಿದಂತೆ ನಾನಾ ಬೆಳೆಗಳು ಹಾನಿಯಾಗಿದ್ದವು. ಈ ಕುರಿತು ಸಮಗ್ರ ಸಮೀಕ್ಷೆ ನಡೆಸುವಂತೆ ಮಾರ್ಚ್ 21 ರಂದು ಜಿಲ್ಲಾಧಿಕಾರಿ, ತೋಟಗಾರಿಕೆ ಮತ್ತು ಕೃಷಿ ಇಲಾಖೆ ಅಧಿಕಾರಿಗಳಿಗೆ ಸಮೀಕ್ಷೆ ನಡೆಸುವಂತೆ ಸೂಚನೆ ನೀಡಲಾಗಿತ್ತು. ಈಗ ಮತ್ತೆ ಅಕಾಲಿಕ ಮಳೆಯಾಗಿ ಕೆಲವು ಕಡೆ ದ್ರಾಕ್ಷಿ ಮತ್ತು ಒಣದ್ರಾಕ್ಷಿ ಶೆಡ್ ಗಳು ಹಾನಿಯಾಗಿವೆ. ಈ ಹಿನ್ನೆಲೆಯಲ್ಲಿ ಕೂಡಲೇ ಅಧಿಕಾರಿಗಳ ಸಭೆ ನಡೆಸಿ ಬೆಳೆಹಾನಿ ಕುರಿತು ಸಮೀಕ್ಷೆ ನಡೆಸಬೇಕು.

ಈ ಸಮೀಕ್ಷೆಯಲ್ಲಿ ಬೆಳೆಹಾನಿಯಾದ ಯಾವುದೇ ರೈತರ ಹೆಸರು ಬಿಟ್ಟು ಹೋಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಕೃಷಿ ಮತ್ತು ತೋಟಗಾರಿಕೆ ಹಾಗೂ ಕಂದಾಯ ಇಲಾಖೆ ಜಂಟಿಯಾಗಿ ಸಮೀಕ್ಷೆ ನಡೆಸಿ ಶೀಘ್ರದಲ್ಲಿ ವರದಿ ಸಲ್ಲಿಸುವಂತೆ ಸಚಿವರು ಜಿಲ್ಲಾಧಿಕಾರಿ ಡಾ. ಆನಂದ ಕೆ. ಅವರಿಗೆ ಸೂಚನೆ ನೀಡಿದ್ದಾರೆ.

ಇದೇ ವೇಳೆ ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ರಾಹುಲ ದೊಡ್ಡಮನಿ ಮತ್ತು ಕೃಷಿ ಇಲಾಖೆ ಜಂಟಿ ನಿರ್ದೇಶಕ ಶಿವನಗೌಡ ಪಾಟೀಲ ಅವರೊಂದಿಗೂ ಮಾತನಾಡಿರುವ ಸಚಿವರು, ಬೆಳೆ ಹಾನಿ ಕುರಿತು ಸಮಗ್ರ ಮತ್ತು ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ ಎಂದು ಸಚಿವರ ಕಚೇರಿಯ ಮಾಧ್ಯಮ ಪ್ರಕಟಣೆಯಲ್ಲಿ ಮಾಹಿತಿ ನೀಡಲಾಗಿದೆ.

# ಪ್ರೊ. ಪ್ರಮೋದ ನಾರಾಯಣರಿಗೆ ಹೃದಯಪೂರ್ವಕ ಬಿಳ್ಕೋಡುಗೆ



**ಜೇವರ್ಗಿ:** ಅಧ್ಯಾಪಕ ವೃತ್ತಿ ಶ್ರೇಷ್ಠವಾದದ್ದು ಶಿಕ್ಷಕರು ಸೇವಾ ಮತ್ತು ತ್ಯಾಗಜೀವಿಗಳಾಗಿ ಬದ್ಧತೆ ಉಳ್ಳವರಾಗಿರ ತಮ್ಮ ಸೇವೆಯನ್ನು ಕಚ್ಚುಕಟ್ಟಾಗಿ ನಿರ್ವಹಿಸುವರು, ಈ ನಿಟ್ಟಿನಲ್ಲಿ ಪ್ರೊ. ಪ್ರಮೋದ ನಾರಾಯಣ ಪೇಟ್ಕರ್ ಅವರು, ಶೈಕ್ಷಣಿಕ ಸೇವೆಯಲ್ಲಿ ಅದ್ಭುತ ವ್ಯಕ್ತಿತ್ವ ಹೊಂದಿದ್ದಾರೆ ಎಂದು ಕಲಬುರಗಿಯ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಭೌತಶಾಸ್ತ್ರ ವಿಭಾಗದ ಸಹ ಪ್ರಾಧ್ಯಾಪಕ ಸಂಗಣ್ಣ ವಿ. ನಿಷ್ಠಿ ಅಭಿಪ್ರಾಯಪಟ್ಟರು. ಅವರು ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿ ನಲ್ಲಿ ಭೌತಶಾಸ್ತ್ರ ವಿಭಾಗದಲ್ಲಿ ಸೇವೆ ಸಲ್ಲಿಸಿ ಸೇವಾ ನಿವೃತ್ತರಾದ ಪೊ. ಪ್ರಮೋದ್ ಎಸ್. ನಾರಾಯಣಪೇಟ್ಕರ್ ಅವರ ಸೇವಾ ನಿವೃತ್ತಿಯ ಬೀಳ್ಕೊಡುಗೆ ಸಮಾರಂಭ ದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು. ಪ್ರಾಂಶುಪಾಲೆ ಡಾ. ಶಾಂತಾ ಅಸ್ಟಿಗೆ ಅಧ್ಯಕ್ಷತೆ ವಹಿಸಿದ್ದರು. ಸೇವಾ ನಿವೃತ್ತ ರಾದ ಪೊ. ಪ್ರಮೋದ್ ನಾರಾಯಣಪೇಟ್ಕರ್ ಮಾತನಾಡಿದರು.

ಗಣಿತಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ. ಎನ್. ಜಿ. ಶ್ರೀಧರ್, ಡಾ. ರೂಪಾ ಕುಲ್ಕರ್ಣಿ, ವರ್ಷಿಣಿ ನಾರಾಯಣಪೇಟ್ಕರ್ ಮಾತನಾಡಿದರು. ಸಿಬ್ಬಂದಿ ಕಾರ್ಯದರ್ಶಿ ಡಾ. ಖಾಜಾವಲಿ ಈಚನಾಳ ಪ್ರಾಸ್ತಾವಿಕ ನುಡಿದರು. ಹಿಂದಿ ವಿಭಾಗದ ಮುಖ್ಯಸ್ಥ ಕುಪೇಂದ್ರ ಸ್ವಾಗತಿಸಿದರು. ಕನ್ನಡ ಅಧ್ಯಾಪಕ ಭೀಮಣ್ಣ ನಿರೂಪಿಸಿದರು.

ಐಕ್ಯುಎಸಿ ಸಂಚಾಲಕ ಡಾ. ಸಂದೀಪ್ ತಿವಾರಿ ವಂದಿಸಿದರು. ಅನುರಾಧಾ ನಾರಾಣಪೇಟಕರ್, ಕಾಲೇಜಿನ ಎಲ್ಲಾ ವಿಭಾಗಗಳ ಮುಖ್ಯಸ್ಥರು, ಪ್ರಾಧ್ಯಾಪಕರು, ಅತಿಥಿ ಉಪನ್ಯಾಸಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಆರ್‌ಸೇಟಿನಿಂದ ಜೂನಿಯರ್ ಬ್ಯೂಟಿ ಪ್ರಾಕ್ಟೀಷನರ್ ತರಬೇತಿಗೆ ಅರ್ಜಿ ಆಹ್ವಾನ

**ರಾಯಚೂರು:**ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ (ಆರ್‌ಸೇಟಿ) ಇವರ ವತಿಯಿಂದ ಗ್ರಾಮೀಣ ನಿರುದ್ಯೋಗಿ ಮಹಿಳೆಯರಿಗಾಗಿ ಜೂನಿಯರ್ ಬ್ಯೂಟಿ ಪ್ರಾಕ್ಟೀಷನರ್ ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ತರಬೇತಿಯು 2026ರ ಏಪ್ರಿಲ್ 10ರಿಂದ ಪ್ರಾರಂಭವಾಗಿ 35ದಿನಗಳ ಕಾಲ ನಡೆಯಲಿದೆ. ತರಬೇತಿಯ ಅವಧಿಯಲ್ಲಿ ಅಭ್ಯರ್ಥಿಗಳಿಗೆ ಉಚಿತ ಊಟ ಹಾಗೂ ಉಚಿತ ವಸತಿ ಸೌಕರ್ಯದ ವ್ಯವಸ್ಥೆ ಇರುತ್ತದೆ. ಆಸಕ್ತರು 10 ನೇ ತರಗತಿ ವ್ಯಾಸಂಗ ಮಾಡಿರುವ 18 ರಿಂದ 45 ವರ್ಷದೊಳಗಿನ ವಯಸ್ಸು ಹೊಂದಿರುವ ಗ್ರಾಮೀಣ ಭಾಗದ ಬಿಪಿಎಲ್ ಅಭ್ಯರ್ಥಿಗಳು ಆಧಾರ್ ಕಾರ್ಡ್ ಜೆರಾಕ್ಸ್, ಗ್ರಾಮೀಣ ಪಡಿತರ ಚೀಟಿ (ಬಿಪಿಎಲ್, ಪಿಎಚ್‌ಎಚ್, ಎನ್‌ಪಿಎಚ್‌ಎಚ್ ಮತ್ತು ಆಯ್‌ವೈ) ಜೆರಾಕ್ಸ್, 4 ಫೋಟೋಗಳು, ಬ್ಯಾಂಕ್ ಪಾಸ್‌ಬುಕ್ ಜೆರಾಕ್ಸ್ ಹಾಗೂ ಪ್ಯಾನ್ ಕಾರ್ಡ್ ಜೆರಾಕ್ಸೊಂದಿಗೆ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ (ಆರ್‌ಸೇಟಿ) ಆಶಾಪೂರು ರಸ್ತೆ, ರಾಯಚೂರು. ಅಥವಾ ಮೊಬೈಲ್ ಸಂಖ್ಯೆ: 8217382735, 9742470999ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆಯ ನಿರ್ದೇಶಕರಾದ ವಿಜಯಕುಮಾರ್ ಬಡಿಗೇರ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಗ್ನಿವೀರ್ ಹುದ್ದೆಗಳಿಗೆ ರಾಯಚೂರು ಜಿಲ್ಲೆಯ ಯುವಕರಿಂದ ಅರ್ಜಿ ಸಲ್ಲಿಸಲು ಏ.10ರವಗೆ ಅವಕಾಶ

**ರಾಯಚೂರು:**ಭಾರತೀಯ ಸೇನೆಯಲ್ಲಿನ ಅಗ್ನಿವೀರ್ ಸೇರಿದಂತೆ ವಿವಿಧ ಹುದ್ದೆಗಳನ್ನು ಸೇರಲು ಆಸಕ್ತಿಯಿರುವ ಬೆಳಗಾವಿ, ಬೀದರ್, ಕಲಬುರಗಿ, ಕೊಪ್ಪಳ, ರಾಯಚೂರು ಯಾದಗಿರಿ ಜಿಲ್ಲೆಗಳ ಯುವಕರಿಗೆ ಅರ್ಜಿ ಸಲ್ಲಿಸಲು ಏಪ್ರಿಲ್ 10ರವರೆಗೆ ಅವಕಾಶ ಕಲ್ಪಿಸಲಾಗಿದೆ.

ಆಸಕ್ತ ಯುವಕರು ಸೇನೆಯ ಅಧಿಕೃತ ವೆಬ್‌ಸೈಟ್ www.joinindianarmy.nic.in ಗೆ ಭೇಟಿ ನೀಡಿ ಅಲ್ಲಿ ಅಗ್ನಿಪಥ್ ಟ್ಯಾಬ್ ಕ್ಲಿಕ್ ಮಾಡಿ, ಆಧಾರ್ ಅಥವಾ 10ನೇ ತರಗತಿ ಸರ್ಟಿಫಿಕೇಟ್ ಬಳಸಿ ನೋಂದಣಿ ಮಾಡಿಕೊಳ್ಳಬಹುದಾಗಿದೆ ಎಂದು ಭಾರತೀಯ ಸೇನೆಯ ಬೆಂಗಳೂರು ಕೇಂದ್ರ ಕಚೇರಿಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಂಗನವಾಡಿ ಕಾರ್ಯಕರ್ತೆ, ಸಹಾಯಕಿಯರ ಹುದ್ದೆಗಳ ತಾತ್ಕಾಲಿಕ ಪಟ್ಟಿ ಪ್ರಕಟ: ಅಕ್ಷೇಪಣೆಗೆ ಅರ್ಜಿ ಆಹ್ವಾನ

**ರಾಯಚೂರು:** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರಾಯಚೂರು ಶಿಶು ಅಭಿವೃದ್ಧಿ ಯೋಜನೆ ರಾಯಚೂರು ವ್ಯಾಪ್ತಿಯಲ್ಲಿ 2025-26ನೇ ಸಾಲಿಗೆ ಅಂಗನವಾಡಿ ಕಾರ್ಯಕರ್ತೆ 01, ಸಹಾಯಕಿಯರು 17 ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಆನ್‌ಲೈನ್ ಮುಖಾಂತರ ಈಗಾಗಲೇ ಅರ್ಜಿಗಳನ್ನು ಅಹ್ವಾನಿಸಲಾಗಿದ್ದು, ಹುದ್ದೆಗಳಿಗೆ ಜಿಲ್ಲಾ ಆಯ್ಕೆ ಸಮಿತಿಯು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ತಾತ್ಕಾಲಿಕವಾಗಿ ಆಯ್ಕೆ ಮಾಡಿರುವುದರಿಂದ ತಾತ್ಕಾಲಿಕ ಆಯ್ಕೆ ಪಟ್ಟಿಗೆ ಅಕ್ಷೇಪಣೆ ಅರ್ಜಿ ಸಲ್ಲಿಸುವವರು ಸೂಕ್ತ ದಾಖಲಾತಿಗಳೊಂದಿಗೆ ದಿನಾಂಕ: 13-04-2026ರೊಳಗಾಗಿ ಸಮಯ ಬೆಳಿಗ್ಗೆ ಬೆಳಿಗ್ಗೆ 08 ಘಂಟೆಯಿಂದ ಮಧ್ಯಾಹ್ನ 01.30ರವರೆಗೆ ಸಲ್ಲಿಸಬಹುದಾಗಿದೆ. ಅಕ್ಷೇಪಣೆ ಸಲ್ಲಿಸುವವರು ಅಕ್ಷೇಪಣೆ ಅರ್ಜಿಯ ಜೊತೆಗೆ ಯಾವುದೇ ದಾಖಲಾತಿಗಳು ಸಲ್ಲಿಸದಿದ್ದಲ್ಲಿ ಅಂತಹವರ ಅಕ್ಷೇಪಣೆ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಾರ್ಯಾಲಯ ರಾಯಚೂರು ಇವರನ್ನು ಸಂಪರ್ಕಿಸುವಂತೆ ಶಿಶು ಅಭಿವೃಧ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಏ.5ರಂದು ಡಾ.ಬಾಬು ಜಗಜೀವನ ರಾಮ್ 119ನೇ ಜನ್ಮ ದಿನಾಚರಣೆ: ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಲು ಮನವಿ

**ರಾಯಚೂರು:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರ ಮಹಾನಗರ ಪಾಲಿಕೆ ಹಾಗೂ ಸಮಾಜ ಕಲ್ಯಾಣ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಭಾರತ ಮಾಜಿ ಉಪ ಪ್ರಧಾನಿ, ಹಸಿರು ಕ್ರಾಂತಿಯ ಹರಿಕಾರ ಡಾ.ಬಾಬು ಜಗಜೀವನ ರಾಮ್ ಅವರ 119ನೇ ಜನ್ಮ ದಿನಾಚರಣೆಯನ್ನು ಏಪ್ರಿಲ್ 5ರ ಬೆಳಿಗ್ಗೆ 11.30ಗಂಟೆಗೆ ನಗರದ ಪಂಡಿತ ಸಿದ್ಧರಾಮ ಜಂಬಲದಿನ್ನಿ ರಂಗಮಂದಿರದಲ್ಲಿ ಹಮ್ಮಿಕೊಳ್ಳಲಾಗಿದ್ದು, ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರು, ಸಮಾಜದ ಎಲ್ಲಾ ಮುಖಂಡರು, ವಿವಿಧ ಸಂಘ-ಸಂಸ್ಥೆಯ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಬೇಕೆಂದು ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜೆಸ್ಕಾಂ ನಿಂದ: ಏಪ್ರಿಲ್ 6, 7ರಂದು ಗ್ರಾಹಕರ ಕುಂದು ಕೊರೆತೆ ಸಭೆ

**ರಾಯಚೂರು:**ರಾಯಚೂರು ಜಿಲ್ಲೆಯ ಎಲ್ಲಾ ತಾಲ್ಲೂಕಿನ ಜೆಸ್ಕಾಂ ಉಪ ವಿಭಾಗಳ ಗ್ರಾಹಕರ ಕುಂದು ಕೊರೆತೆ ತ್ರೈಮಾಸಿಕ ಸಭೆಯನ್ನು ಅಧೀಕ್ಷಕ ಅಭಿಯಂತರರು(ವಿ) ರಾಯಚೂರು ಅವರ ಅಧ್ಯಕ್ಷತೆಯಲ್ಲಿ ಏಪ್ರಿಲ್ 6ರ ಬೆಳಿಗ್ಗೆ 10ಗಂಟೆಗೆ ರಾಯಚೂರು ಗ್ರಾಮೀಣ ಉಪ ವಿಭಾಗ, ಏಪ್ರಿಲ್ 7ರ ಬೆಳಿಗ್ಗೆ 10ಗಂಟೆಗೆ ದೇವದುರ್ಗದಲ್ಲಿ ಹಮ್ಮಿಕೊಳ್ಳಲಾಗಿದ್ದು, ಈ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಗ್ರಾಹಕರು ಹಾಜರಾಗಿ ತಮ್ಮ ಕುಂದು ಕೊರತೆಗಳನ್ನು ನಿವಾರಿಸಿಕೊಳ್ಳಬಹುದಾಗಿದೆ ಎಂದು ಜೆಸ್ಕಾಂ ಅಧೀಕ್ಷಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜೆಸ್ಕಾಂ: ಏಪ್ರಿಲ್ 6ರಂದು ವಿವಿಧ ಕಡೆ ವಿದ್ಯುತ್ ವ್ಯತ್ಯಯ

**ರಾಯಚೂರು:** ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗ 1ರ ಶಾಖೆ 5ರಲ್ಲಿ ಜಂಗಲ್ ಕಟಿಂಗ್ ಕಾಮಗಾರಿ ನಿರ್ವಹಿಸುತ್ತಿರುವ ಪ್ರಯುಕ್ತ ಏಪ್ರಿಲ್ 6ರ ಬೆಳಿಗ್ಗೆ 10ರಿಂದ ಮಧ್ಯಾಹ್ನ 1ಗಂಟೆಯವರೆಗೆ ನಗರದ ಜಿ.ಡಿ. ತೋಟ, ಜಹಿರಾಬಾದ್, ಬಿ.ಆರ್.ಬಿ. ಸರ್ಕಲ್, ಮಂಗಲವಾರ್ ಪೇಟೆ, ಗೀತಾ ಮಂದಿರ್ ರೋಡ್, ಪಟೇಲ್ ರೋಡ್, ಬ್ರೇಸ್ತ್ ವಾರಪೇಟೆ, ಪದ್ಮಾನಾಭ ಟಾಕೀಸ್, ನೇತಾಜಿ ನಗರ, ಮೋಚಿವಾಡ, ಶೆಟ್ಟಿಬೌಳಿ ಸರ್ಕಲ್, ಬಂಗಾರ್ಬಜರ್, ಉಪ್ಪಾರ್ವಾಡಿ ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08532-226386, 08532-231999, 9480845955 ಅಥವಾ 9448395621ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗ 1ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂಸ್ಕಾರದಿಂದಲೇ ಮಕ್ಕಳ ಭವಿಷ್ಯ ರೂಪುಗೊಳ್ಳುತ್ತದೆ: ಆನಂದ ಶ್ರೀಗಳು



**ಜಮಖಂಡಿ, ಏ.4:**ತಂದೆ-ತಾಯಿಗಳು ನೀಡುವ ಸಂಸ್ಕಾರದಂತೆ ಮಕ್ಕಳು ಬೆಳೆಯುತ್ತಾರೆ. ಆದ್ದರಿಂದ ಮಕ್ಕಳಿಗೆ ಬಾಲ್ಯದಲ್ಲೇ ದುಡ್ಡಿನ ಮಹತ್ವ ಹಾಗೂ ಅನ್ನದ ಬೆಲೆ ತಿಳಿಸಿಕೊಡಬೇಕು ಎಂದು ಓಲೆಮಠದ ಆನಂದ ದೇವರು ಶ್ರೀಗಳು ಹೇಳಿದರು. ತಾಲ್ಲೂಕಿನ ಟಕ್ಕಳಕಿ ಗ್ರಾಮದಲ್ಲಿ ಓಲೆಮಠದ ಆಶ್ರಯದಲ್ಲಿ ವ್ಯಸನಮುಕ್ತ ಗ್ರಾಮಗಳ ನಿರ್ಮಾಣದ ಸಂಕಲ್ಪದೊಂದಿಗೆ "ದುಶ್ಚಟಗಳ ಭಿಕ್ಷೆ, ಸದ್ಗುಣಗಳ ದೀಕ್ಷೆ" ಎಂಬ ಧ್ಯೇಯದಡಿ ನಾಲ್ಕು ದಿನಗಳ ಕಾಲ ಹಮ್ಮಿಕೊಂಡಿದ್ದ ಜನಜಾಗೃತಿ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಆಶೀರ್ವಚನ ನೀಡಿದರು.

ಮಕ್ಕಳ ಮುಂದೆ ಸಣ್ಣಪುಟ್ಟ ಸುಳ್ಳುಗಳನ್ನೂ ಹೇಳಬಾರದು. ಇಂತಹ ಸುಳ್ಳುಗಳು ಮುಂದೆ ದೊಡ್ಡ ತಪ್ಪುಗಳಿಗೆ ದಾರಿ ಮಾಡಿಕೊಡುತ್ತವೆ. ಪಾಲಕರು ಮಕ್ಕಳಿಗೆ ಸತ್ಯನಿಷ್ಠೆ ಹಾಗೂ ಉತ್ತಮ ಗುಣಗಳನ್ನು ಬೋಧಿಸಬೇಕು ಎಂದು ಅವರು ಸಲಹೆ ನೀಡಿದರು.

ಮಾಜಿ ಶಾಸಕ ಆನಂದ ನ್ಯಾಮಗೌಡ ಮಾತನಾಡಿ, ದುಶ್ಚಟಗಳನ್ನು ಬಿಡಿಸಿ ಉತ್ತಮ ಬದುಕಿನತ್ತ ದಾರಿತೋರುವ ಕಾರ್ಯವನ್ನು ಓಲೆಮಠದ ಪೂಜ್ಯರು ಮಾಡುತ್ತಿದ್ದಾರೆ. ದುಶ್ಚಟ ತೊರೆದ ಯುವಕರು ಮತ್ತೆ ಅದಕ್ಕೆ ಒಳಗಾಗಬಾರದು ಎಂದು ಹೇಳಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಮುತ್ತಣ್ಣ ಹಿಪ್ಪರಗಿ ಮಾತನಾಡಿ, ಗ್ರಾಮೀಣ ಸಂಸ್ಕೃತಿ ಮತ್ತು ಸಂಸ್ಕಾರಗಳನ್ನು ಉಳಿಸುವಲ್ಲಿ ಮಹಿಳೆಯರ ಪಾತ್ರ ಮಹತ್ವದ್ದಾಗಿದೆ. ಭಾರತೀಯ ಸಂಸ್ಕೃತಿಯನ್ನು ಎತ್ತಿಹಿಡಿಯುವಲ್ಲಿ ಕಲಾವಿದರ ಪಾತ್ರ ದೊಡ್ಡದು ಎಂದರು.

ಝುಂಜರವಾಡದ ಬಸವರಾಜ ಶರಣರು ಪ್ರವಚನ ನೀಡಿದರು. ಈ ಸಂದರ್ಭದಲ್ಲಿ ತಾಲ್ಲೂಕಿನ ವಿವಿಧ ಕ್ಷೇತ್ರಗಳ ಕಲಾವಿದರನ್ನು ಓಲೆಮಠದ ವತಿಯಿಂದ ಸನ್ಮಾನಿಸಿ "ಜೀವಮಾನ ಸಾಧನೆ ಸಮಾಜಸೇವಾ ರತ್ನ" ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕಾರ್ಯಕ್ರಮದಲ್ಲಿ ಅರ್ಬನ್ ಬ್ಯಾಂಕ್ ಅಧ್ಯಕ್ಷ ರಾಹುಲ ಕಲೂತಿ, ನಗರಸಭೆ ಮಾಜಿ ಅಧ್ಯಕ್ಷ ಪರಮಾನಂದ ಗವರೋಜಿ, ಬಿ.ಜಿ. ಪಾಟೀಲ, ನಿಖಿಲ ಮಹಾಬಳಶೆಟ್ಟಿ, ವೈ.ಎಸ್. ನ್ಯಾಮಗೌಡ, ಶಿವಗೌಡ ಪಾಟೀಲ, ಧರೆಪ್ಪ ಆಲಗೂರ, ರುದ್ರಯ್ಯಸ್ವಾಮಿ, ಸಂಜೀವ ಹುದ್ದಾರ, ಸಂಗಮೇಶ ಗೆಣ್ಣೂರ, ಸತೀಶ ಗೆಣ್ಣೂರ, ಡಾ.ಟಿ.ಪಿ. ಗಿರಡ್ಡಿ, ಸದಾನಂದ ಬಾಗೇವಾಡಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಆನಂದ ಬ್ಯಾಳಿ ಮತ್ತು ಹನಮಂತ ಅಂಕದ ಸಂಗೀತ ಸೇವೆ ಸಲ್ಲಿಸಿದರು. ಸುಶೀಲಕುಮಾರ ಬೆಳಗಲಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಕ್ಷಕ ನೇಮಿನಾಥ ನ್ಯಾಮಗೌಡ ಕಾರ್ಯಕ್ರಮ ನಿರೂಪಿಸಿದರು.

# ಎ.10 ರಂದು ಉಚಿತ ವೈದಿಕ ಸಂಸ್ಕಾರ ಶಿಬಿರ; ಮದ್ರಿ



**ಚಿತ್ತಾಪುರ;ಏ.4:** ಜಂಗಮ ಸಮಾಜದ ವಿದ್ಯಾರ್ಥಿಗಳಿಗೆ ಪೂಜೆ, ಪಾಠ, ಮಂತ್ರ ಸೇರಿ 45 ದಿನಗಳ ವೈದಿಕ ಸಂಸ್ಕಾರ ಶಿಬಿರವನ್ನು ಕ್ಷೇತ್ರದ ಶಾಸಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐಟಿಬಿಟಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಉದ್ಘಾಟಿಸಲಿದ್ದಾರೆ ಎಂದು ಜಂಗಮ ಸಮಾಜದ ತಾಲೂಕು ಅಧ್ಯಕ್ಷ ಶಂಕರಯ್ಯ ಸ್ವಾಮಿ ಮದ್ರಿ ಹೇಳಿದರು.

ಪಟ್ಟಣದ ಅಕ್ಕಮಹಾದೇವಿ ಮಂದಿರದಲ್ಲಿ ತಾಲೂಕು ಜಂಗಮ ಸಮಾಜದ ವತಿಯಿಂದ ನಡೆಸಿದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಂಗಮ ಸಮಾಜದ ಮಕ್ಕಳಿಗೆ ವೈದಿಕ ಸಂಸ್ಕಾರ ಬಿಂಬಿಸುವಂತ ಕೆಲಸ ಮಾಡಲಾಗುತ್ತಿದೆ. ಮಕ್ಕಳ ವ್ಯಕ್ತಿತ್ವ ವಿಕಾಸನದ ಜತೆಗೆ ಸಂಸ್ಕಾರ ಅಗತ್ಯವಿದೆ ಎಂದರು.

ಏ.10ರಂದು 45 ದಿನಗಳ ಕಾಲ ಬೇಸಿಗೆ ರಜೆಯಲ್ಲಿ ವೈದಿಕ ಸಂಸ್ಕಾರಗಳನ್ನು ಉಚಿತವಾಗಿ ಬೋದಿಸಲಾಗುತ್ತದೆ. ಶಿಬಿರದಲ್ಲಿ ಆಚಾರ ವಿಚಾರ, ನಡೆ ನುಡಿ, ಯೋಗ, ಧ್ಯಾನ, ವೈದಿಕ ಶಿವಪೂಜೆ ಸೇರಿ ಅನೇಕ ವಿಷಯಗಳ ಭೋದನೆ ಮಾಡಲಾಗುತ್ತದೆ. ಪಟ್ಟಣ ಸೇರಿದಂತೆ ತಾಲೂಕಿನ ವಿವಿಧ ಗ್ರಾಮದ ಜಂಗಮರು ಉಚಿತ ಊಟ, ವಸತಿಯೊಂದಿಗೆ ನಡೆಯುವ ಈ ಶಿಬಿರದಲ್ಲಿ ಭಾಗವಹಿಸುವಂತೆ ಹೇಳಿದ್ದಾರೆ. ಕಾರ್ಯಕ್ರಮವನ್ನು ಏ.10ರಂದು ಅಕ್ಕಮಹಾದೇವಿ ಮಂದಿರದಲ್ಲಿ ಬೆಳ್ಳಿಗೆ 11ಕ್ಕೆ ಕ್ಷೇತ್ರದ ಶಾಸಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಐಟಿಬಿಟಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಉದ್ಘಾಟಿಸಲಿದ್ದಾರೆ. ಶಾಸಕರಾದ ಅಲ್ಲಂ ಪ್ರಭು ಪಾಟೀಲ್, ಲತಾ ಎಂ.ಪಿ ಪ್ರಕಾಶ ಸೇರಿ ರಾಜಕೀಯ ಗಣ್ಯರು, ವಿವಿಧ ಮಠಾಧೀಶರು ಸೇರಿ ಜಂಗಮ ಮತ್ತು ವೀರಶೈವ ಸಮಾಜದ ಮುಖಂಡರು ಪಾಲ್ಗೊಳ್ಳಲಿದ್ದಾರೆ ಎಂದರು.

ಜಂಗಮ ಸಮಾಜದ ಕಾರ್ಯದರ್ಶಿ ಸಿದ್ದಯ್ಯಸ್ವಾಮಿ ಕೋಳಕೂರ ಮಾತನಾಡಿ, ಸಂಸ್ಕಾರ ಶಿಬಿರಗಳು ಮನುಷ್ಯನನ್ನು ಪರಿವರ್ತನೆ ಮಾಡುತ್ತವೆ. ಒಳ್ಳೆಯ ನಡುವಳಿಕೆ ರೂಪಿಸಿಕೊಳ್ಳಲು ಸಹಕಾರಿಯಾಗುತ್ತವೆ. ಶಿಬಿರದಲ್ಲಿ ಪ್ರತಿ ಭಾನುವಾರ ವಿಶೇಶ ಉಪನ್ಯಾಸವಿರುತ್ತದೆ ಎಂದರು.

ಸಮಾಜದ ಒಗ್ಗಟ್ಟು ಹಾಗೂ ಶ್ರೇಯೋಭಿವೃದ್ಧಿಗಾಗಿ ತಾಲೂಕು ಜಂಗಮ ಸಮಾಜ ರಚನೆಯಾಗಿದೆ. ಏ. 10ರಂದು ತಾಲೂಕು ಜಂಗಮ ಸಮಾಜದ ಅಧ್ಯಕ್ಷ ಶಂಕರಯ್ಯಸ್ವಾಮಿ ಮದ್ರಿ ಅವರ ನೇತೃತ್ವದಲ್ಲಿ ವಿವಿಧ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ನೆರವೇರಲಿದೆ ಎಂದು ತಿಳಿಸಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಸಮಾಜದ ತಾಲೂಕು ಅಧ್ಯಕ್ಷ ನಾಗರಾಜ ಭಂಕಲಗಿ ಮಾತನಾಡಿದರು.

ಸುದ್ದಿಗೋಷ್ಠಿಯಲ್ಲಿ ಶಿಬಿರದ ಆಯೋಜಕ ಮಂಜುನಾಥ ಶಾಸ್ತ್ರೀ, ಮುಖಂಡರಾದ ಆನಂದ ಪಾಟೀಲ್ ನರಬೋಳಿ, ಮಲ್ಲಿಕಾರ್ಜುನರೆಡ್ಡಿ ಇಜಾರ, ಬಸಯ್ಯ ಸ್ವಾಮಿ ಸಾತನೂರ, ಮಲ್ಲಯ್ಯ ಸ್ವಾಮಿ ವಾಡಿ, ಅನೀಲಕುಮಾರ ವಡ್ಡಡಗಿ, ಶಾಂತಕುಮಾರ ಹತ್ತಿ, ದೊಡ್ಡಯ್ಯ ಸ್ವಾಮಿ ಪತ್ರಿ ಕರದಾಳ, ಬಸಯ್ಯ ಸ್ವಾಮಿ ರಾವೂರ ಇದ್ದರು.

# ಧರ್ಮ ಮಾರ್ಗದಿಂದ ಮುಕ್ತಿ ಸಾಧ್ಯ



**ಬೀದರ್: ಏ.4:**ಧರ್ಮ ಮಾರ್ಗದಲ್ಲಿ ಸಾಗುವುದರಿಂದ ಜೀವನ ಮುಕ್ತಿ ಹೊಂದಲು ಸಾಧ್ಯವಿದೆ ಎಂದು ಆಣದೂರಿನ ಭಂತೆ ಜ್ಞಾನಸಾಗರ್ ಹೇಳಿದರು.ತಾಲ್ಲೂಕಿನ ಅಲಿಯಂಬರ್ ಗ್ರಾಮದ ತಕ್ಷಶೀಲ ಬುದ್ಧ ವಿಹಾರದಲ್ಲಿ ಚೈತ್ರ ಪೂರ್ಣಿಮೆ ನಿಮಿತ್ತ ಗುರುವಾರ ಆಯೋಜಿಸಿದ್ದ ಪ್ರವಚನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಗೌತಮ ಬುದ್ಧರ ತತ್ವ, ಆದರ್ಶಗಳು ಶ್ರೇಷ್ಠವಾಗಿವೆ. ಅಂತೆಯೇ ಮಹಾ ಜ್ಞಾನಿ ಆಗಿದ್ದ ಡಾ. ಬಿ.ಆರ್. ಅಂಬೇಡ್ಕರ್ ಅವರು ಬೌದ್ಧ ಧರ್ಮ ಸ್ವೀಕರಿಸಿದ್ದರು ಎಂದು ತಿಳಿಸಿದರು.ಗೌತಮ ಬುದ್ಧರ ತತ್ವಗಳ ಅನುಕರಣೆಯಿಂದ ವಿಶ್ವದಲ್ಲಿ ಶಾಂತಿ, ನೆಮ್ಮದಿ ಹಾಗೂ ಸಮೃದ್ಧಿ ನೆಲೆಗೊಳ್ಳಲಿದೆ ಎಂದು ಹೇಳಿದರು.ಗೌತಮ ಬುದ್ಧರ ತತ್ವಗಳನ್ನು ಎಲ್ಲರೂ ಪಾಲಿಸಬೇಕು. ಮೂಢ ಆಚರಣೆಗಳಿಂದ ದೂರ ಇರಬೇಕು ಎಂದು ಸಲಹೆ ಮಾಡಿದರು.

ಆಣದೂರಿನ ಭಂತೆ ಧಮ್ಮಾನಂದ ಮಹಾ ಥೆರೋ ಕಾರ್ಯಕ್ರಮ ಉದ್ಘಾಟಿಸಿದರು. ಭಂತೆ ಕರುಣಾನಂದ, ಭಂತೆ ಸಂಘಸೇವಕ, ಮಾತೆ ಅರ್ಚಸ್ಮತಿ, ಪ್ರಮುಖರಾದ ವೀರಶೆಟ್ಟಿ ಕಟ್ಟೆ, ಸಂತೋಷ್ ಪಡಸಲೆ, ಸಂಗಮೇಶ ಬಾವಿದೊಡ್ಡಿ, ಧರ್ಮೇಂದ್ರ ಯರನಳ್ಳಿ, ಶಂಕರ ಚೊಂಡಿ, ತುಕಾರಾಮ ಜನವಾಡ, ರಾಜಕುಮಾರ ಹಾಲಹಿಪ್ಪರ್ಗೆ, ರಮೇಶ ಬಾವಿದೊಡ್ಡಿ, ರಾಜಕುಮಾರ ಬಾವಿದೊಡ್ಡಿ, ಬೌದ್ಧ ಉಪಾಸಕ, ಉಪಾಸಕಿಯರು ಇದ್ದರು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE